# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರು : ಶ್ರೀ. ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 781

ಉತ್ತರಿಸಬೇಕಾದ ದಿನಾಂಕ : 15.12.2020

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ D.C.C ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಸಲು ಕಾನೂನು ಬಾಹಿರವಾಗಿ ಗುತ್ತಿಗೆ ನೀಡಿರುವುದು ಮತ್ತು ಇನ್ನಿತರ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಬಂದಿದ್ದಲ್ಲಿ, ತನಿಖಾ ತಂಡವು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ; (ವಿವರ ನೀಡುವುದು) | ತನಿಖಾ ತಂಡವು ಪ್ರಾಥಮಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ತನಿಖಾ ತಂಡದ ಮುಖ್ಯಸ್ಥರಾದ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಇವರು ಸರ್ಕಾರದಿಂದ ಗುರುತಿಸಲಾಗಿದ್ದ ಒಟ್ಟು 04 ಆರೋಪಗಳ ಸಂಬಂಧ ಪರಿಶೀಲನೆ ಕೈಗೊಂಡು ಸರ್ಕಾರಕ್ಕೆ ದಿನಾಂಕ: 15-09-2020 ರಂದು ವರದಿ ಸಲ್ಲಿಸಿರುತ್ತಾರೆ. ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ |
| ಇ) | ಸಲ್ಲಿಸಿದ್ದಲ್ಲಿ, ರುಜುವಾತಾದ ಆರೋಪಗಳ ಸಂಖ್ಯೆ ಎಷ್ಟು; | ಪ್ರಾಥಮಿಕ ವರದಿಯಲ್ಲಿ ಸರ್ಕಾರವು ಸೂಚಿಸಿದ್ದ 4 ಆರೋಪಗಳಲ್ಲಿ 3 ಆರೋಪಗಳು ಸಾಬೀತಾಗಿರುವುದಾಗಿ ವರದಿಸಿರುತ್ತಾರೆ. |
| ಈ) | ತಪ್ಪಿತಸ್ಥರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಿಒ 32 ಸಿಸಿಬಿ 2020, ಬೆಂಗಳೂರು ದಿನಾಂಕ: 22-10.2020 ರನ್ವಯ ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಸುಮಾರು ರೂ.965.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಕೆಯನ್ನು ರದ್ದುಗೊಳಿಸಿ ಆದೇಶಿರುತ್ತದೆ.<br><br>ಸದರಿ ವರದಿಯಲ್ಲಿ 3 ಆರೋಪಗಳು ಸಾಬೀತಾಗಿರುವುದಾಗಿ ತಿಳಿಸಿದ್ದರಿಂದ ಸರ್ಕಾರದ ನಿರ್ದೇಶನದಂತೆ ಸಂಬಂಧಪಟ್ಟವರ ವಿರುದ್ಧ ಸೂಕ್ತ ಜವಾಬ್ದಾರಿಗಳನ್ನು ನಿಗದಿಪಡಿಸುವುದಕ್ಕಾಗಿ |

| | | |
|---|---|---|
| | | ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಇವರು ತಮ್ಮ ಆದೇಶ ಸಂ: ಜೆಆರ್‌ಎಂ/ ಆಡಳಿತ/ಎ/ಕ್ಯೂಎಸ್‌ಇ/ ಸಿ.ಆರ್-40/2020-21 ದಿ: 02-12-2020 ರಂದು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64 ರಡಿ ಶಾಸನಬದ್ಧ ವಿಚಾರಣೆಗೆ ಆದೇಶಿಸಿರುತ್ತಾರೆ.<br><br>ಸರ್ಕಾರದ ನಿರ್ದೇಶನದನ್ವಯ ಶಾಸನಬದ್ಧ ವಿಚಾರಣೆಗೆ ಆದೇಶಿಸಿದ್ದು, ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ವಿಚಾರಣಾ ವರದಿ ಸ್ವೀಕೃತವಾದ ನಂತರ ನಿಯಮಾನುಸಾರ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ವಿವರವನ್ನು ಅನುಬಂಧ- 2 ರಲ್ಲಿ ನೀಡಲಾಗಿದೆ. |

ಕಡತ ಸಂಖ್ಯೆ: ಸಿಒ 118 ಸಿಸಿಬಿ 2020

ಎಸ್.ಟಿ. ಸೋಮಶೇಖರ್

**(ಎಸ್. ಟಿ. ಸೋಮಶೇಖರ್)**

ಸಹಕಾರ ಸಚಿವರು

# ಅನುಬಂಧ - 1

ಕರ್ನಾಟಕ ಸರ್ಕಾರ

ಸಹಕಾರ ಸಂಘಗಳ ಉಪ ನಿಬಂಧಕರು
ಮೈಸೂರು ಜಿಲ್ಲೆ, ಮೈಸೂರು

ಸಹಕಾರ ಇಲಾಖೆ

**<u>ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ರವರ ಕಾರ್ಯಾಲಯ</u>**
**<u>ಸಾರ್ವಜನಿಕ ಕಛೇರಿಗಳ ಕಟ್ಟಡ, ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು</u>**

ಕ್ರಮಾಂಕ:ಉನಿಮೈ:ದೂರು ಅರ್ಜಿ:ಜಿ.ಸ.ಕೇ.ಬ್ಯಾಂಕ್ ಮಂಡ್ಯ: :2020-21 ದಿನಾಂಕ:15.09.2020

ಗೆ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರಲ್ಲಿ ನಡೆದಿರುವ ಅವ್ಯವಹಾರಗಳ ಕುರಿತು ತನಿಖೆ ಮಾಡುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಆದೇಶ ಕ್ರಮಾಂಕ:ಸಿಓ 32 ಸಿಸಿಬಿ 2020, ಬೆಂಗಳೂರು ದಿನಾಂಕ:05.05.2020.

2.ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು ರವರ ನೋಟೀಸ್ ಕ್ರಮಾಂಕ:ಆರ್‌ಸಿಎಸ್ /ಸಿಆರ್‌ಇ/ಕೆಎಂಸಿ-1/14/2020-21 ದಿನಾಂಕ:10.06.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ತಮ್ಮ ಆದೇಶದ ರೀತ್ಯಾ ಹಾಗೂ ಉಲ್ಲೇಖ (2)ರ ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ ಬೆಂಗಳೂರು ರವರ ಸೂಚನೆಯನ್ವಯ ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರಲ್ಲಿ ನಡೆದಿರುವ ವ್ಯವಹಾರಗಳ ಕುರಿತು ದೂರು ಅರ್ಜಿಯಲ್ಲಿ ನಾಲ್ಕು ಅಂಶಗಳ ಬಗ್ಗೆ ತನಿಖಾ ತಂಡವು ವಿವಿಧ ದಿನಾಂಕಗಳಂದು ಬ್ಯಾಂಕಿಗೆ ಭೇಟಿ ನೀಡಿ ಆರೋಪವಾರು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿ ಆರೋಪವಾರು ಈ ಕೆಳಕಂಡಂತೆ ಅಭಿಪ್ರಾಯ ನೀಡಲಾಗಿರುತ್ತದೆ.

**<u>ಆರೋಪ:-1 ಬ್ಯಾಂಕಿನಲ್ಲಿ ಸುಮಾರು ರೂ. 965 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೋರ್ ಬ್ಯಾಂಕಿಂಗ್ ಸೆಲ್ಯೂಷನ್ (ಸಿಬಿಎಸ್) ಅಳವಡಿಸುವ ಬಗ್ಗೆ ಬ್ಯಾಂಕಿನ ಆರ್‌ಎಫ್‌ಪಿ ಮತ್ತು ಕೆಟಿಪಿಪಿ ಆಕ್ಟ್ ಉಲ್ಲಂಘಿಸಿ ಎನ್‌ಐಆರ್‌ಐ ಜೊತೆ ಶಾಮೀಲಾಗಿ ಮೆ.ಯುಎಸ್‌ಟಿ ಇಂಟರ್ ನ್ಯಾಷನಲ್ ಪ್ರೈವೇಟ್ ಲಿ, ರವರಿಗೆ ಐದು ವರ್ಷಗಳ ಕಾಲ ಕಾರ್ಯಾದೇಶ ನೀಡಿರುವ ಬಗ್ಗೆ.</u>**

ಸದರಿ ಆರೋಪದ ಕುರಿತು ತನಿಖಾ ತಂಡವು ಬ್ಯಾಂಕಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಲಾಗಿರುತ್ತದೆ. ಸಿಬಿಎಸ್ ಸೇವೆಯ ಯೋಜನಾ ಅನುಷ್ಠಾನದ ಹಂತಗಳಲ್ಲಿ ಕಾರ್ಯನಿರ್ವಹಿಸಲು ಸಲಹೆಗಾರರನ್ನು ನೇಮಿಸಿಕೊಳ್ಳುವ ಕುರಿತು ದಿನಾಂಕ:05.03.2019ರಂದು ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-03 ರಲ್ಲಿ ಚರ್ಚಿಸಿ ನುರಿತ ತಜ್ಞರನ್ನು ನೇಮಿಸಿಕೊಳ್ಳಲು ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು



Scanned with CamScanner

ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.(ಅನುಬಂಧ-1) ಬ್ಯಾಂಕಿನ ಅಧ್ಯಕ್ಷರ ದಿನಾಂಕ08.07.2019ರ ಆದೇಶದ ಮೇರೆಗೆ ಸದರಿ ದಿನಾಂಕದಂದು ಅಧ್ಯಕ್ಷರು, ಉಪಾಧ್ಯಕ್ಷರು, ಮುಖ್ಯಕಾರ್ಯನಿರ್ವಹಣಾಧಿಕಾರಿ, ನಿರ್ದೇಶಕರುಗಳಾದ ಶ್ರೀ ಸತೀಶ್, ಹಾಗೂ ಶ್ರೀ ಕೆ.ಸಿ ಯೋಗೀಗೌಡ ಇವರುಗಳನ್ನು ಒಳಗೊಂಡ ಕೋರ್ ಬ್ಯಾಂಕಿಂಗ್ ಸಲ್ಯೂಷನ್ (CBS) ಉಪಸಮಿತಿಯನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ರಚಿಸಿರುತ್ತಾರೆ. (ಅನುಬಂಧ-2)

ದಿನಾಂಕ: 05.03.2019ರ ಆಡಳಿತ ಮಂಡಳಿಯ ತೀರ್ಮಾನದ ಮೇರೆಗೆ Digital Age strategies pvt, Ltd., Bengaluru ಇವರನ್ನು ಕೋರ್ ಬ್ಯಾಂಕಿಂಗ್ ಸಿಸ್ಟಮ್ (CBS) ಇದಕ್ಕೆ ತಾಂತ್ರಿಕ ಸಲಹೆಗಾರರನ್ನಾಗಿ ನೇಮಿಸಿಕೊಂಡು ಕಾರ್ಯಾದೇಶವನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ದಿನಾಂಕ: 11.07.2019ರಂದು ನೀಡಿರುತ್ತಾರೆ. (ಅನುಬಂಧ-3) Digital Age strategies pvt, Ltd., Bengaluru ಇವರು CBS ಸಂಬಂಧ Request for proposal (RFP) ನೀಡಿರುವ ಕುರಿತು ದಿನಾಂಕ: 21.08.2019 ರಂದು ನಡೆದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-27 ರಲ್ಲಿ ಚರ್ಚಿಸಿದ್ದು, RFP ಗೆ ಇನ್ನೂ ಕೆಲವು ಅಂಶಗಳನ್ನು ಸೇರಿಸುವ ಬಗ್ಗೆ ಸಲಹೆಗಾರರಿಗೆ ಸೂಚಿಸಿ ನಂತರ RFP ಯ ಪೂರ್ಣ ವರದಿಯನ್ನು ಆಡಳಿತ ಮಂಡಳಿ ಸಭೆಗೆ ಮಂಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. (ಅನುಬಂಧ-4)

Digital Age strategies pvt, Ltd., Bengaluru ರವರು ನೀಡಿರುವ ಆರ್ ಎಫ್ ಪಿ ಕರಡು ಪ್ರತಿಯನ್ನು ಯಥಾವತ್ತಾಗಿ ಮುಂದಿನ ಆಡಳಿತಮಂಡಳಿ ಸಭೆಗೆ ಮಂಡಿಸಿ ಆರ್‌ಎಫ್‌ಪಿ ವರದಿಯಲ್ಲಿರುವ ಪರಿಷ್ಕರಣೆಗಳ ಬಗ್ಗೆ ಪರಿಶೀಲಿಸುವುದು ಸೂಕ್ತವೆಂದು ದಿನಾಂಕ:09.09.2019ರಂದು ನಡೆದ ಸಿಬಿಎಸ್ ಉಪಸಮಿತಿ ಸಭೆಯಲ್ಲಿ ಸರ್ವಾನುಮತದ ತೀರ್ಮಾನದ ಮೇರೆಗೆ (ಅನುಬಂಧ-5) ದಿನಾಂಕ:18.09.2019ರಂದು ನಡೆದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-13 ರಲ್ಲಿ ಚರ್ಚಿಸಿದ್ದು, RFP ಯಲ್ಲಿನ ನ್ಯೂನತೆಗಳ ಬಗ್ಗೆ ಪರಿಶೀಲಿಸಲು ಬ್ಯಾಂಕಿನ ನಿರ್ದೇಶಕರಾದ ಶ್ರೀ.ಎಂ.ಹೊನ್ನೇಗೌಡ, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಸಹಕಾರ ಸಂಘಗಳ ಉಪನಿಬಂಧಕರು ಮಂಡ್ಯ ಜಿಲ್ಲೆ, ಮಂಡ್ಯ, ತಾಂತ್ರಿಕ ಸಲಹೆಗಾರರು, ಬ್ಯಾಂಕಿನ ಹಿರಿಯ ಅಧಿಕಾರಿಗಳು ಹಾಗೂ ಐ.ಟಿ ವಿಭಾಗದ ಸಿಬ್ಬಂದಿಗಳನ್ನು ಒಳಗೊಂಡ ತಂಡವನ್ನು ರಚಿಸಲು ಹಾಗೂ RFP ವರದಿಯಲ್ಲಿನ ಮಾರ್ಪಾಡುಗಳನ್ನು ಮಾಡಿದ ನಂತರ ಪರಿಷ್ಕೃತ ಆರ್‌ಎಫ್‌ಪಿ ವರದಿಯನ್ನು ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. (ಅನುಬಂಧ_7) ಪರಿಷ್ಕೃತ RFP ವರದಿಯ ಬಗ್ಗೆ ದಿನಾಂಕ:15.10.2019 ರಂದು ನಡೆದ ಸಿಬಿಎಸ್ ಉಪಸಮಿತಿ ಸಭೆಯ ವಿಷಯ ಸಂಖ್ಯೆ-03 ರಲ್ಲಿ ಚರ್ಚಿಸಿದ್ದು, ಪರಿಷ್ಕೃತ RFP ವರದಿಯನ್ನು ಪರಿಶೀಲಿಸಿ ಸದರಿ ವರದಿಯನ್ನು ಆಡಳಿತ ಮಂಡಳಿ ಸಭೆಯ ಪರಿಶೀಲನೆಗೆ ಮತ್ತು ಅಂಗೀಕಾರಕ್ಕಾಗಿ ಮಂಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. (ಅನುಬಂಧ-8) ಪರಿಷ್ಕೃತ RFP ವರದಿಯ ಬಗ್ಗೆ ದಿನಾಂಕ:23.10.2019 ರಂದು ನಡೆದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-17ರಲ್ಲಿ ಚರ್ಚಿಸಿದ್ದು, ಪರಿಷ್ಕೃತ RFP ವರದಿಯನ್ನು ಮತ್ತು DPR (Detailed Project Report) ನಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ನ ಅಂದಾಜು ದರ ಐದು ವರ್ಷಗಳಿಗೆ ಅನ್ವಯವಾಗುವಂತೆ ತೆರಿಗೆ ಹೊರತುಪಡಿಸಿ ರೂ.8,34,85,080.00 ಗಳ ಅಂದಾಜು ನಿರ್ವಹಣಾ ವೆಚ್ಚವನ್ನು ಅಂಗೀಕರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಮುಂದುವರೆದು ಸಿಬಿಎಸ್ ಟೆಂಡರ್ ಪ್ರಕ್ರಿಯೆಯನ್ನು ಕರ್ನಾಟಕ ಪಾರದರ್ಶಕ



Scanned with CamScanner

ಕಾರ್ಯಾನ್ವಯ ಕೈಗೊಳ್ಳಲು ಸಹ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. (ಅನುಬಂಧ-9) ಆರ್ ಎಫ್ ಪಿ ವರದಿಗಳನ್ನು (ಅನುಬಂಧ-9ಎ ಹಾಗೂ 9ಬಿ) ಎಂದು ಗುರುತಿಸಲಾಗಿದೆ.

ದಿನಾಂಕ:08.11.2019ರಂದು ನಡೆದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-03 ರಲ್ಲಿ **Digital Age strategies pvt, Ltd., Bengaluru** ರವರ ಸೇವೆಯಲ್ಲಿ ಹಲವಾರು ಲೋಪದೋಷಗಳಿರುತ್ತವೆ ಎಂದು ಹಾಗೂ ಇವರ ನೇಮಕಾತಿ ಬಗ್ಗೆ ದೂರು ಅರ್ಜಿಗಳು ಸಹಕಾರ ಇಲಾಖೆಗೆ ಸಲ್ಲಿಕೆಯಾಗಿರುವ ಬಗ್ಗೆ ಚರ್ಚಿಸಿ **Digital Age strategies pvt, Ltd., Bengaluru** ರವರ ಸೇವೆಯನ್ನು ವಜಾಗೊಳಿಸಲು ಹಾಗೂ ಸಿಬಿಎಸ್ ಅನುಷ್ಠಾನದ ಮುಂದಿನ ಹಂತಗಳಿಗೆ ಕಾರ್ಯನಿರ್ವಹಿಸಲು ಸರ್ಕಾರದಿಂದ ಮಾನ್ಯತೆ ಪಡೆದಿರುವ **NIRB** ಸಂಸ್ಥೆಯನ್ನು ತಾಂತ್ರಿಕ ಸಲಹೆಗಾರರನ್ನಾಗಿ ನೇಮಿಸಿಕೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. (ಅನುಬಂಧ-10 ಹಾಗೂ ಅನುಬಂಧ-11) ಸದರಿ ತೀರ್ಮಾನದ ರೀತ್ಯಾ **National Institute for Rural banking (NIRB) Bangalore** ಈ ಸಂಸ್ಥೆಯನ್ನು ಸಲಹೆಗಾರರನ್ನಾಗಿ ನೇಮಿಸಿಕೊಂಡು ದಿನಾಂಕ: 22.11.2019ರಂದು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಕಾರ್ಯಾದೇಶ ನೀಡಿರುತ್ತಾರೆ. ಆದರೆ **Digital Age strategies pvt, Ltd., Bengaluru** ಹಾಗೂ **National Institute for Rural banking (NIRB) Bangalore** ಈ ಸಂಸ್ಥೆಗಳನ್ನು ತಾಂತ್ರಿಕ ಸಲಹೆಗಾರರನ್ನಾಗಿ ನೇಮಿಸಿಕೊಳ್ಳುವ ಪೂರ್ವದಲ್ಲಿ ಪಾರದರ್ಶಕ ನಿಯಮ ಪಾಲಿಸಿರುವುದು ಕಂಡುಬಂದಿರುವುದಿಲ್ಲ. (ಅನುಬಂಧ-12)

ದಿನಾಂಕ:12.12.2019 ರಂದು ನಡೆದ ಸಿಬಿಎಸ್ ಉಪಸಮಿತಿ ಸಭೆಯ ವಿಷಯ ಸಂಖ್ಯೆ 04ರಲ್ಲಿ ಎನ್‌ಐಆರ್‌ಬಿ, ಬೆಂಗಳೂರು ರವರು ದಿನಾಂಕ:29.11.2019 ರಂದು ನಡೆದ **Pre Bid Meeting** ನಲ್ಲಿ ಚರ್ಚಿಸಿದ್ದ ವಿಷಯಗಳ ಬಗ್ಗೆ ನೀಡಿರುವ **Addendum/ Corrigendum** ಪರಿಶೀಲಿಸುವ ಕುರಿತು ಚರ್ಚಿಸಿದ್ದು, ಸದರಿ **Addendum/ Corrigendum** ಅನ್ನು ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. (ಅನುಬಂಧ-13) ಈ ಬಗ್ಗೆ ದಿನಾಂಕ:20.12.2019 ರಂದು ನಡೆದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-19ರಲ್ಲಿ ಚರ್ಚಿಸಿದ್ದು, ಆರ್‌ಎಫ್‌ಪಿ ವರದಿಯ ಕ್ರಮಸಂಖ್ಯೆ-02 ರ **Eligibility creiteria** ದ **average turnover** ಅನ್ನು ರೂ 40.00 ಕೋಟಿಯಿಂದ ರೂ.25.00 ಕೋಟಿಗಳಿಗೆ ಇಳಿಕೆ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಮುಂದುವರೆದು **CBS software IP rights certificate** ಅನ್ನು ಮೌಲ್ಯಮಾಪನ ಪ್ರಕ್ರಿಯೆ ಮುಗಿಯುವುದರೊಳಗೆ ಸಲ್ಲಿಸಲು ಅವಕಾಶವನ್ನು ನೀಡಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ ಹಾಗೂ ಮೇಲಿನ ಎಲ್ಲಾ ಮಾರ್ಪಾಡುಗಳನ್ನು ಮಾಡಿ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಮತ್ತು ಮುಂದಿನ ಹಂತದ ಕ್ರಮ ಕೈಗೊಳ್ಳಲು ಸಹ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ (ಅನುಬಂಧ-14, ದಿನಾಂಕ:20.12.2019 ರ ಪರಿಷ್ಕತ RFP ವರದಿಯನ್ನು ಅನುಬಂಧ-15 ಎಂದು ಲಗತ್ತಿಸಿದೆ.)

ದಿನಾಂಕ:08.01.2020 ರಂದು ಜರುಗಿದ **CBS** ಉಪಸಮಿತಿ ಸಭೆಯ ನಿರ್ಣಯದ ರೀತ್ಯಾ ಬ್ಯಾಂಕಿಗೆ ಸಲ್ಲಿಕೆಯಾಗಿರುವ ಟೆಂಡರ್ ಅರ್ಜಿಗಳಿರುವ ತಾಂತ್ರಿಕ ಬಿಡ್‌ಗಳನ್ನು ತೆರೆದು ಮುಂದಿನ ಹಂತವಾದ ಮೌಲ್ಯಮಾಪನ ಪ್ರಕ್ರಿಯೆ ಕೈಗೊಳ್ಳುವ ಕುರಿತು ಚರ್ಚಿಸಿದ್ದು, ಈ ಕೆಳಕಂಡ 6 ಕಂಪನಿಗಳು ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ಮುದ್ದಾಂ ಸಲ್ಲಿಸಿರುವುದು ಕಂಡುಬಂದಿರುತ್ತದೆ.

1. **V-soft technology Pvt Ltd., Hyderabad.**



Scanned with CamScanner

2. **Mega soft information System Ltd.,**
3. **Virmati software and Telecomunication Ltd., Gujarat**
4. **US technology international Pvt Ltd., Trivendrum**
5. **infra soft Technology Ltd., Mumbai**
6. **Sesame software solution Pvt Ltd., Kerala.**

ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಸ್ವೀಕೃತವಾಗಿರುವ ಟೆಂಡರ್ ಅರ್ಜಿಗಳ ಕುರಿತು ನೀಡಿರುವ ದಾಖಲಾತಿಗಳ ಅನುಸಾರ ಈ ಕೆಳಕಂಡ 4 ಕಂಪನಿಗಳು ಇ- ಪೋರ್ಟಲ್ ಮುಖಾಂತರ ಇ-ಟೆಂಡರ್ ಅರ್ಜಿ ಸಲ್ಲಿಸಿರುವುದು ಕಂಡುಬಂದಿರುತ್ತದೆ.

1. **V-soft technology Pvt Ltd., Hyderabad.**
2. **Mega soft information System Ltd.,**
3. **Virmati software and Telecomunication Ltd., Gujarat**
4. **FINCURO solutions Pvt Ltd.,**

ಬ್ಯಾಂಕಿನ RFP ಪ್ರಕಾರ ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಸಲ್ಲಿಕೆಯಾಗದ ಅರ್ಜಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದಿರಲು ಹಾಗೂ ಸದರಿಯವರು ಬ್ಯಾಂಕಿಗೆ ಸಲ್ಲಿಸಿರುವ ಸೀಲ್ ಮಾಡಿದ ಟೆಂಡರ್ ಅರ್ಜಿಗಳನ್ನು ಯಥಾವತ್ತಾಗಿ ಕಂಪನಿಗಳ ಪ್ರತಿನಿಧಿಗಳಿಗೆ ನಿಯಮಾನುಸಾರ ಹಿಂದಿರುಗಿಸಲು ಸರ್ವಾನುಮತದಿಂದ ತೀರ್ಮಾನವಾಗಿರುತ್ತದೆ. ಆದರೆ **US technology international Pvt Ltd., Trivendrum** ಈ ಕಂಪನಿಯು ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಬಿಡ್ ಸಲ್ಲಿಸದೇ ಇದ್ದಾಗ್ಯೂ ಸಹ ಈ ಕಂಪನಿಯು ಸೇರಿದಂತೆ ಒಟ್ಟು 4 ಕಂಪನಿಗಳ ತಾಂತ್ರಿಕ ಬಿಡ್‌ಗಳನ್ನು ಹೆಚ್ಚುವರಿ ಪರಿಶೀಲನೆಗಾಗಿ ಮತ್ತು ಮೌಲ್ಯಮಾಪನ ಪ್ರಕ್ರಿಯೆಯನ್ನು ನಿಯಮಾನುಸಾರ ಕೈಗೊಳ್ಳಲು NIRB ಬೆಂಗಳೂರು ರವರಿಗೆ ನೀಡಲು ಹಾಗೂ ಮೌಲ್ಯಮಾಪನ ವರದಿಯನ್ನು ಬ್ಯಾಂಕಿಗೆ ನೀಡುವಂತೆ ಸದರಿ ಸಂಸ್ಥೆಯನ್ನು ಕೋರಲು ಸರ್ವಾನುಮತದಿಂದ ತೀರ್ಮಾನವಾಗಿರುತ್ತದೆ. (ಅನುಬಂಧ-16 ಹಾಗೂ ಅನುಬಂಧ-16 ಎ ಎಂದು ಲಗತ್ತಿಸಿದೆ)

ದಿನಾಂಕ:28.02.2020 ರಂದು ಜರುಗಿದ ಆಡಳಿತ ಮಂಡಳಿ ಸಭೆಯಲ್ಲಿ NIRB ಸಂಸ್ಥೆಯವರು ಮೌಲ್ಯಮಾಪನ ವರದಿಯನ್ನು ಮಂಡಿಸಿರುತ್ತಾರೆ. (ಅನುಬಂಧ-17 ಎಂದು ಲಗತ್ತಿಸಿದೆ) ಸದರಿ ಮೌಲ್ಯಮಾಪನ ವರದಿ ಬಗ್ಗೆ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-30 ರಲ್ಲಿ ಚರ್ಚಿಸಿದ್ದು ದಾಖಲಾತಿಗಳನ್ನು ಸಲ್ಲಿಸಿರುವ 4 ಕಂಪನಿಗಳಲ್ಲಿ **Mega soft information System Ltd., Mumbai,** ಕಂಪನಿಯು Eligibility creiteria ದ ಪ್ರಕಾರ ಕೆಲವು ದಾಖಲಾತಿಗಳನ್ನು ಸಲ್ಲಿಸಲು ವಿಫಲರಾಗಿರುವುದರಿಂದ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ತಿರಸ್ಕೃತಗೊಂಡಿರುತ್ತದೆ ಎಂದು ಹಾಗೂ ಉಳಿದ 3 ಕಂಪನಿಗಳು ಪೂರ್ಣ ಪ್ರಮಾಣದಲ್ಲಿ ದಾಖಲಾತಿಗಳನ್ನು ಸಲ್ಲಿಸಿರುವುದರಿಂದ ತಾಂತ್ರಿಕ ಮೌಲ್ಯಮಾಪನ ಪ್ರಕ್ರಿಯೆಯನ್ನು ಕೈಗೊಂಡಿರುವುದಾಗಿ NIRB ಸಂಸ್ಥೆಯ ಪ್ರತಿನಿಧಿಯು ಸಭೆಯಲ್ಲಿ ತಿಳಿಸಿರುತ್ತಾರೆ. ಈ ಪೈಕಿ **VIRMATI Software And Telecomunication Ltd., GUJARAT** ಇವರು ತಾಂತ್ರಿಕ ಮೌಲ್ಯಮಾಪನದಲ್ಲಿ ಕಡಿಮೆ ಅಂಕಗಳನ್ನು ಅಂದರೆ 100 ಕ್ಕೆ 54 ಅಂಕಗಳನ್ನು ಗಳಿಸಿರುವುದರಿಂದ ಸದರಿ ಕಂಪನಿಯ ವಾಣಿಜ್ಯ ಬಿಡ್‌ಗಳನ್ನು ತೆರೆಯಲು ಅವಕಾಶವಿರುವುದಿಲ್ಲ ಎಂದು ಸಭೆಗೆ **NIRB** ಸಂಸ್ಥೆಯ ಪ್ರತಿನಿಧಿ ವಿವರಿಸಿದ್ದು, ತಾಂತ್ರಿಕ ಸಲಹೆಗಾರರ ಸಲಹೆಯಂತೆ ಸದರಿ ಕಂಪನಿಯ ವಾಣಿಜ್ಯ ಬಿಡ್‌ನ್ನು



Scanned with CamScanner

ತೆರೆಯದಿರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತಾರೆ. 100 ಕ್ಕೆ 86 ಅಂಕ ಗಳಿಸಿರುವ U.S Technology International Pvt Ltd., Trivandrum ಹಾಗೂ 83 ಅಂಕ ಗಳಿಸಿರುವ V-Soft Technology Pvt Ltd Hyderabad ಈ ಕಂಪನಿಗಳು ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾಗಿರುತ್ತಾರೆ ಎಂದು ನಮೂದಿಸಿರುವುದು ಕಂಡುಬಂದಿರುತ್ತದೆ.

ಬ್ಯಾಂಕಿನ RFP ಯಲ್ಲಿನ ತಾಂತ್ರಿಕ ಹಾಗೂ ವಾಣಿಜ್ಯ ಬಿಡ್‌ಗಳ ಮೌಲ್ಯಮಾಪನದಲ್ಲಿ ಬರುವ ಅಂಕಗಳನ್ನು 70:30 ರ ಅನುಪಾತದಲ್ಲಿ ಸಮ್ಮಿಶ್ರಗೊಳಿಸಿ Formula ದೊಡನೆ ಮೌಲ್ಯಮಾಪನ ರೀತ್ಯಾ 0.99873 ಅಂಕ ಗಳಿಸಿದ U.S Technology International Pvt Ltd., Trivandrum ಇದನ್ನು L-1 ರ್‍ಯಾಂಕಿಂಗ್ ಎಂದು 0.97558 ಅಂಕ ಗಳಿಸಿರುವ V-Soft Technology Pvt Ltd Hyderabad ಇದನ್ನು L-2 ರ್‍ಯಾಂಕಿಂಗ್ ಎಂದು ಗುರುತಿಸಿದ್ದು RFP ನ ಟೆಂಡರ್ ಡಾಕ್ಯೂಮೆಂಟ್ ನ ರೀತ್ಯಾ L-1 ಆಗಿ U.S Technology International Pvt Ltd., Trivandrum ಇವರನ್ನು ಯಶಸ್ವಿ ಬಿಡ್ಡುದಾರರಾಗಿ ASP (Application Service Provider) ಮಾದರಿಯಲ್ಲಿ ಬ್ಯಾಂಕಿನ CBS ಅಳವಡಿಕೆ ಮತ್ತು ಸೇವೆಯ 5 ವರ್ಷಗಳ ಅವಧಿಗೆ ನಿಯೋಜಿಸಿಕೊಳ್ಳಬಹುದೆಂದು NIRB ಸಂಸ್ಥೆಯ ಪ್ರತಿನಿಧಿ ಸಭೆಯಲ್ಲಿ ತಿಳಿಸಿರುತ್ತಾರೆ: ಸದರಿ ಸಭೆಯಲ್ಲಿ ನಿರ್ದೇಶಕರಾದ ಶ್ರೀ.ಎಸ್.ನಾಗರಾಜು ಮತ್ತು ದೂರುದಾರರಾದ ಶ್ರೀ.ಎಂ.ಹೊನ್ನೇಗೌಡ ರವರು ಮಾತನಾಡಿ ಸದರಿ ಕಂಪನಿಗಳಲ್ಲಿ Intellectual Property Rights (IPR) ಇರುವ ಬಗ್ಗೆ ದೃಢೀಕರಿಸುವಂತೆ ತಾಂತ್ರಿಕ ಸಲಹೆಗಾರರಾದ NIRB ಬೆಂಗಳೂರು ರವರಿಗೆ ತಿಳಿಸಿದ್ದು ಸದರಿ ಸಂಸ್ಥೆಯ ಪ್ರತಿನಿಧಿಯವರು ಮಾತನಾಡಿ ಆಯ್ಕೆಯಾಗಿರುವ 2 ಕಂಪನಿಗಳು ಸಲ್ಲಿಸಿರುವ ದಾಖಲಾತಿಗಳಲ್ಲಿ IPR ಸಮರ್ಪಕವಾಗಿಲ್ಲದಿರುವುದರಿಂದ ಸದರಿ ಕಂಪನಿಗಳ Software Ownership ನ್ನು ಖಚಿತಪಡಿಸಿಕೊಳ್ಳಲಾಗಿರುತ್ತದೆ ಎಂದು ಸಭೆಗೆ ವಿವರಿಸಿರುತ್ತಾರೆ. ಆದರೆ ಯಾವ ರೀತಿಯಲ್ಲಿ NIRB ಬೆಂಗಳೂರು ಇವರು Software Ownership ನ್ನು ಖಚಿತಪಡಿಸಿಕೊಳ್ಳಲಾಗಿರುತ್ತದೆ ಎಂಬುದರ ಬಗ್ಗೆ ನಡಾವಳಿಯಲ್ಲಿ ದಾಖಲಿಸಿರುವುದು ಕಂಡುಬಂದಿರುವುದಿಲ್ಲ.

ಆಯ್ಕೆಯಾದ 2 ಕಂಪನಿಗಳ ವಾಣಿಜ್ಯ ಬಿಡ್‌ಗಳನ್ನು ತೆರೆಯಲು ಈ ಸಭೆಯಲ್ಲಿ ತಾಂತ್ರಿಕ ದೋಷದಿಂದ ವಿಫಲವಾದ ಕಾರಣ ಮುಚ್ಚಿದ ಲಕೋಟೆಯ ವಾಣಿಜ್ಯ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಆದ್ದರಿಂದ ಸಭೆಯನ್ನು ದಿನಾಂಕ:04.03.2020 ರಂದು ಜರುಗಿಸಲು ಸಭೆಯನ್ನು ಮುಂದೂಡಲು ಸರ್ವಾನುಮತದಿಂದ ತೀರ್ಮಾನಿಸಿದ್ದು ಈ ಸಭೆಯಲ್ಲಿ ಯಶಸ್ವಿ ಬಿಡ್ಡುದಾರರ ಬಗ್ಗೆ ನಿರ್ಣಯವಾಗಿರುವುದಿಲ್ಲ. ದಿನಾಂಕ:04.03.2020 ರಂದು ಮುಂದೂಡಿದ ಆಡಳಿತ ಮಂಡಳಿ ಸಭೆಯನ್ನು ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಬ್ಯಾಂಕಿನ ಐ.ಟಿ.ವಿಭಾಗದವರು ದಿನಾಂಕ:28.02.2020 ರಂದು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ ನಲ್ಲಿ ಸಂಜೆ 6 ಗಂಟೆ 28 ನಿಮಿಷಕ್ಕೆ ವಾಣಿಜ್ಯ ಬಿಡ್‌ನ ಮಾಹಿತಿಯು ಲಭ್ಯವಾಗಿರುತ್ತದೆ ಎಂದು ತಿಳಿಸಿದ್ದು ಇದರ ಪ್ರಕಾರ V-Soft Technology Pvt Ltd Hyderabad ಇದನ್ನು ರ್‍ಯಾಂಕಿಂಗ್ L-1 ಎಂದು 0.97558 ಅಂಕ ಗಳಿಸಿರುವ FINCURO Solutions Pvt Ltd Trivandrum ಇದನ್ನು ರ್‍ಯಾಂಕಿಂಗ್ L-2 ಎಂದು ಗುರುತಿಸಿರುವುದು ಕಂಡುಬಂದಿರುತ್ತದೆ. ಸದರಿ ಸಭೆಯಲ್ಲಿ ರ್‍ಯಾಂಕಿಂಗ್ L-1 ಮತ್ತು L-2 ಬಗ್ಗೆ, FINCURO SOLUTIONS Pvt Ltd Trivandrum ಈ ಕಂಪನಿಯು U.S technology international Pvt Ltd., Trivandrum ಇದರ ಅಂಗ



Scanned with CamScanner

ಸಂಸ್ಥೆಯಾಗಿರುವ ಬಗ್ಗೆ ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡುವಾಗ QCBS (quality and cost based selection) ಆಯ್ಕೆ ಮಾಡದೆ ಆಗಿರುವ ತಾಂತ್ರಿಕ ದೋಷದ ಬಗ್ಗೆ ಹಾಗೂ ದರ ಸಂದಾನದ ಬಗ್ಗೆ ಚರ್ಚೆ ನಡೆಸಿದ್ದು ಅಂತಿಮವಾಗಿ U.S Technology International Pvt Ltd., Trivandrum ಇವರು L-1 ಆಗಿರುವುದರಿಂದ ದರ ಸಂದಾನ ಮಾಡಿರುವ ಮೊಬಲಗು ರೂ.8.18 ಕೋಟಿ ಹಾಗೂ ಜಿಎಸ್‌ಟಿ @18% ರೂ.1.47 ಕೋಟಿ ಸೇರಿದಂತೆ ಒಟ್ಟು ರೂ.9.65 ಕೋಟಿ ಗಳಿಗೆ ಬ್ಯಾಂಕಿನ ಮುಂದಿನ 5 ವರ್ಷಗಳ ಅವಧಿಗೆ CBS ಸೇವೆಗೆ ಆಯ್ಕೆ ಮಾಡಲು ಹಾಗೂ ಸದರಿ ಕಂಪನಿಯವರಿಗೆ Letter of Intent ಅನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಮುಂದುವರೆದು FINCURO SOLUTIONS Pvt Ltd Trivandrum, U.S technology international Pvt Ltd., Trivandrum, ಹಾಗೂ ಬ್ಯಾಂಕ್ ಸೇರಿ ತ್ರಿಪಕ್ಷೀಯ ಸೇವಾ ಒಪ್ಪಂದವನ್ನು ಮಾಡಿಕೊಳ್ಳಲು ಸಹ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ.

V-Soft technology Pvt Ltd Hyderabad ಈ ಕಂಪನಿಯು ದಿನಾಂಕ:01.03.2020 ರಂದು ಸಿಬಿಎಸ್ ಟೆಂಡರ್‌ಗೆ ಸಂಬಂಧಿಸಿದಂತೆ ನೀಡಿರುವ ಪತ್ರವನ್ನು ಸಭೆಗೆ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮಂಡಿಸಿದ್ದು, ಈ ಬಗ್ಗೆ ಸಭೆಯು ಚರ್ಚಿಸಿ ಬ್ಯಾಂಕಿನ ತಾಂತ್ರಿಕ ಸಲಹೆಗಾರರಾದ NIRB ಬೆಂಗಳೂರು ರವರಿಂದ ಸ್ಪಷ್ಟೀಕರಣ ಪಡೆದು ಕಂಪನಿಯವರಿಗೆ ಪತ್ರ ಬರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಬ್ಯಾಂಕಿನ ವತಿಯಿಂದ V-Soft Technology Pvt Ltd Hyderabad ಇದರ ದಿನಾಂಕ:29.02.2020 ರ ಪತ್ರವನ್ನು ಮಾತ್ರ ಹಾಜರುಪಡಿಸಿದ್ದು, ದಿನಾಂಕ:01.03.2020 ರ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಮುಂದುವರೆದು NIRB ಬೆಂಗಳೂರು ರವರು ಸ್ಪಷ್ಟೀಕರಣ ನೀಡಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. (ದಿನಾಂಕ:04.03.2020ರ ಆಡಳಿತ ಮಂಡಳಿ ನಿರ್ಣಯವನ್ನು ಅನುಬಂಧ-18 ಎಂದು ಮತ್ತು V-Soft technology Pvt Ltd Hyderabad ಇವರ ದಿನಾಂಕ:29.02.2020ರ ಪತ್ರವನ್ನು ಅನುಬಂಧ-19 ಎಂದು ಗುರುತಿಸಲಾಗಿದೆ)

ಈ ಆರೋಪಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಆಡಳಿತ ಮಂಡಳಿ ಸಭೆ ಹಾಗೂ CBS ಉಪಸಮಿತಿ ಸಭೆಗಳ ನಡಾವಳಿಗಳು, ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.

1. CBS ಸೇವೆಯನ್ನು ಬ್ಯಾಂಕಿಗೆ ಅಳವಡಿಸುವ ಸಂಬಂಧ ಕರ್ನಾಟಕ ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ ಆದಂತಹ https://eproc.karnataka.gov.in ರಲ್ಲಿ ದಿನಾಂಕ:06.11.2019 ರಂದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ದಿನಾಂಕ:04.01.2020 ರ ಸಂಜೆ 5.00 ಘಂಟೆಯವರೆವಿಗೆ ಕಾಲವಕಾಶವನ್ನು ನೀಡಲಾಗಿರುತ್ತದೆ.
2. ಬ್ಯಾಂಕಿನಲ್ಲಿ CBS ಅಳವಡಿಸುವ ಸಂಬಂಧ Digital Age strategies pvt, Ltd., Bengaluru ಇವರು RFP ಸಿದ್ಧಪಡಿಸಿರುತ್ತಾರೆ ಸದರಿ RFP ಮತ್ತು ಕರ್ನಾಟಕ ಪಾರದರ್ಶಕ ಕಾಯ್ದೆಯನ್ವಯ ಇ-ಟೆಂಡರ್ ಕರೆದಿರುವುದು ಕಂಡುಬಂದಿರುತ್ತದೆ.
3. ಬ್ಯಾಂಕಿನಲ್ಲಿ CBS ಅಳವಡಿಸುವ ಸಂಬಂಧ ತಾಂತ್ರಿಕ ಸಲಹೆಗಾರರಾಗಿ ಮೊದಲು Digital Age strategies pvt, Ltd., Bengaluru ರವರನ್ನು ನೇಮಕ ಮಾಡಿಕೊಂಡಿದ್ದು ಸದರಿಯವರ



Scanned with CamScanner

ನೇಮಕಾತಿ ಕುರಿತು ಹೆಚ್ಚಿನ ಮಾಹಿತಿ ಇಲ್ಲ ಸಂಸ್ಥೆಗಳು ಮತ್ತು ಸ್ಥಳ, ವ್ಯಕ್ತಿಗಳ ಕುರಿತು ಯಾವ ಸ್ಪಷ್ಟೀಕರಣವಿಲ್ಲ ನಂತರ National Institute for Rural Banking (NIRB) Bangalore ಇವರನ್ನು ನೇಮಿಸಿಕೊಂಡಿರುತ್ತಾರೆ. ಇದಕ್ಕೆ ತಾಂತ್ರಿಕ ಮೌಲ್ಯಮಾಪನ ನಿರ್ವಹಣೆಯಲ್ಲಿ ಪಾರದರ್ಶಕತೆ ಪಾಲಿಸಿರುವುದಿಲ್ಲ.

4. RFP ರಚನೆ ಬಳಿಕ ಪ್ರಿ ಬಿಡ್ ಮೀಟಿಂಗ್‌ನಲ್ಲಿ ಬಿಡ್ದಾರರ ಆಕ್ಷೇಪಣೆಗಳನ್ನು ಪರಿಗಣಿಸಿ ಮಾರ್ಪಾಡು ಮಾಡಿದ ಪರಿಷ್ಕೃತ RFP ಯನ್ನು ಅಪ್‌ಲೋಡ್ ಮಾಡಿರುತ್ತಾರೆ.

೫. RFP ರಚಿಸುವ ಸಂಬಂಧ ಪರಿಶೀಲನಾ ಉಪಸಮಿತಿ ರಚಿಸಿದ್ದು ಸದರಿ ಸಮಿತಿಯಲ್ಲಿ ಸಹಕಾರ ಸಂಘಗಳ ಉಪನಿಬಂಧಕರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಇತರರು ಇದ್ದು ಸದರಿಯವರು ಸಹ ಸಹಿ ಪರಿಶೀಲನೆ ಸಹಿ ಮತ್ತು ಪರಿಶೀಲನೆಯಾಗಿರುತ್ತದೆ.

೬. ಪ್ರಿ ಬಿಡ್ ಮೀಟಿಂಗ್ ಪ್ರಕಾರ RFP ಯಲ್ಲಿ ಅಳವಡಿಸಿಕೊಂಡಂತೆ Intellectual Property Rights (IPR) Certificate ಗಳನ್ನು ಪರಿಗಣಿಸದೇ Tender ಪ್ರಕ್ರಿಯೆ ನಡೆಸಿರುತ್ತಾರೆ.

7. ಬ್ಯಾಂಕ್ ಸಿದ್ಧಪಡಿಸಿದ RFP ಯ ರೀತ್ಯಾ ಸಿಬಿಎಸ್ ಅಳವಡಿಕೆಗೆ ಟೆಂಡರ್ ಸಲ್ಲಿಸುವ ಕಂಪನಿಗಳು ಇ-ಟೆಂಡರ್ ಜೊತೆಗೆ ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಸಲ್ಲಿಸಬೇಕು ಎಂದು ಅಳವಡಿಸಿಕೊಂಡಿರುತ್ತಾರೆ.

೮. ತಾಂತ್ರಿಕ ಬಿಡ್ ಹಂತದಲ್ಲಿ Tender ಪ್ರಕ್ರಿಯೆಯಲ್ಲಿ ಒಟ್ಟು ೮ ಕಂಪನಿಗಳು ಭಾಗವಹಿಸಿರುತ್ತವೆ. ಅದರಲ್ಲಿ Infra soft Technology Ltd., Mumbai ಮತ್ತು Sesame software solution Pvt Ltd., Kerala. ಈ 2 ಕಂಪನಿಗಳು ಮುಚ್ಚಿದ ಲಕೋಟೆಯಲ್ಲಿ Tender ಸಲ್ಲಿಸಿದ್ದು E-Tender ಸಲ್ಲಿಸದೇ ಇರುವುದರಿಂದ ಸದರಿಯವರ Tender ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. ಇದರ U.S technology international Pvt Ltd., Trivandrum, ಇವರು ಇ-ಟೆಂಡರ್ ಸಲ್ಲಿಸಿರುವುದಿಲ್ಲ ಹಾಗೂ FINCURO SOLUTIONS Pvt Ltd Trivandrum ಇವರು ಮುಚ್ಚಿದ ಲಕೋಟೆಯಲ್ಲಿ ಟೆಂಡರ್ ಸಲ್ಲಿಸಿರುವುದಿಲ್ಲ ಆದಾಗ್ಯೂ ಈ ಕಂಪನಿಗಳನ್ನು ತಿರಸ್ಕರಿಸಿರುವುದಿಲ್ಲ.

೯. V-Soft technology Pvt Ltd Hyderabad, Mega soft information System Ltd, Virmati software and Telecomunication Ltd., Gujarat ಹಾಗೂ FINCURO SOLUTIONS Pvt Ltd Trivandrum ಈ ಕಂಪನಿಗಳು E-Tender ಮುಖಾಂತರ ಟೆಂಡರ್ ಸಲ್ಲಿಸಿದ್ದು ಈ ಪೈಕಿ Mega soft information System Ltd, ಕಂಪನಿಯು ಸಮರ್ಪಕ ದಾಖಲೆಗಳನ್ನು ಸಲ್ಲಿಸದ ಕಾರಣ ಹಾಗೂ Virmati software and Telecomunication Ltd., Gujarat ಕಂಪನಿಯು ತಾಂತ್ರಿಕ ಮೌಲ್ಯಮಾಪನದಲ್ಲಿ ಕಡಿಮೆ ಅಂಕ ಗಳಿಸಿದ ಹಿನ್ನಲೆಯಲ್ಲಿ National Institute for Rural Banking (NIRB) Bangalore ಈ ಸಂಸ್ಥೆಯವರು ತಿರಸ್ಕರಿಸಿರುವುದು ಕಂಡುಬಂದಿರುತ್ತದೆ.



Scanned with CamScanner

10. Infra soft Technology Ltd., Mumbai ಮತ್ತು Sesame software solution Pvt Ltd., Kerala. ಈ 2 ಕಂಪನಿಗಳು ಮುಚ್ಚಿದ ಲಕೋಟೆಯಲ್ಲಿ Tender ಸಲ್ಲಿಸಿದ್ದು ಇ-ಪೋರ್ಟಲ್‌ನಲ್ಲಿ ಟೆಂಡರ್ ಅರ್ಜಿ ಸಲ್ಲಿಸದೇ ಇರುವ ಕಾರಣದಿಂದ ಸದರಿಯವರುಗಳ ಟೆಂಡರ್ ಅರ್ಜಿಯನ್ನು ತಿರಸ್ಕರಿಸಿದ್ದು. U.S Technology International Pvt Ltd., Trivandrum ಇವರು ಇ-ಪೋರ್ಟಲ್‌ನಲ್ಲಿ ಇ-ಟೆಂಡರ್ ಅರ್ಜಿ ಸಲ್ಲಿಸದೇ ಇದ್ದಾಗ್ಯೂ ಸಹ ಸದರಿ ಕಂಪನಿಯ ತಾಂತ್ರಿಕ ಬಿಡ್‌ನ್ನು ತಿರಸ್ಕರಿಸದೆ ಅಂಗೀಕರಿಸಿರುವುದನ್ನು ಗಮನಿಸಲಾಗಿದೆ.

11. E-Tender ನಲ್ಲಿ ಅಂತಿಮವಾಗಿ FINCURO SOLUTIONS Pvt Ltd Trivandrum ಮತ್ತು V-Soft technology Pvt Ltd Hyderabad ಕಂಪನಿಗಳು ತಾಂತ್ರಿಕ ಬಿಡ್‌ನಲ್ಲಿ ಅಂತಿಮವಾಗಿ ಉಳಿದಿದ್ದ ಈ ವೈರಿ ತಾಂತ್ರಿಕ ಸಲಹೆಗಾರರಾದ National Institute for Rural Banking (NIRB) Bangalore ಇವರು ತಾಂತ್ರಿಕವಾಗಿ ಅವಲೋಕಿಸಿ FINCURO SOLUTIONS Pvt Ltd Trivandrum ಇದನ್ನು L-1 ಎಂದು V-Soft technology Pvt Ltd Hyderabad L-2 ಎಂದು ರ್‍ಯಾಂಕಿಂಗ್ ನೀಡಿ ಘೋಷಿಸಿರುತ್ತಾರೆ. ಆದರೆ E-Tender ನಲ್ಲಿ FINCURO SOLUTIONS Pvt Ltd Trivandrum ಇದನ್ನು L-2 ಎಂದು V-Soft Technology Pvt Ltd Hyderabad L-1 ಎಂದು ದಾಖಲಾಗಿರುವುದು ಕಂಡುಬಂದಿರುತ್ತದೆ.

12. U.S Technology International Pvt Ltd., Trivandrum ಇವರು E-Tender ನಲ್ಲಿ ಭಾಗವಹಿಸದೆ ಇದ್ದಾಗ್ಯೂ ಸಹ ಸದರಿ ಕಂಪನಿಯನ್ನು ಯಶಸ್ವಿ ಬಿಡ್‌ದಾರರು ಎಂದು NIRB ಸಂಸ್ಥೆಯ ಪ್ರತಿನಿಧಿ ರವರು ಘೋಷಿಸಿರುತ್ತಾರೆ.

13. ಬ್ಯಾಂಕ್ ಸಿದ್ಧಪಡಿಸಿರುವ RFP ಪ್ರಕಾರ CBS ಅಳವಡಿಕೆಗೆ ಟೆಂಡರ್ ಸಲ್ಲಿಸುವ ಕಂಪನಿಯು 10 ವರ್ಷಗಳ ವೃತ್ತಿಪರತೆ ಸೇವಾ ಅನುಭವ ಹೊಂದಿರಬೇಕಾಗುತ್ತದೆ ಆದರೆ FINCURO SOLUTIONS Pvt Ltd Trivandrum ಈ ಕಂಪನಿಯು ಹತ್ತು ವರ್ಷಗಳ ಸೇವಾ ಅನುಭವ ಹೊಂದಿಲ್ಲದಿರುವುದು ಕಂಡುಬಂದಿರುತ್ತದೆ. ಹಾಗೂ U.S Technology International Pvt Ltd., Trivandrum ಇವರು ಸಾಫ್ಟ್‌ವೇರ್ ಮಾಲಿಕತ್ವ (IPR) ಹೊಂದಿರುವ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿರುವುದು ಕಂಡುಬಂದಿರುವುದಿಲ್ಲ. ಮತ್ತು ರೂ.25.00 ಕೋಟಿಗಳ ವ್ಯಾಪಾರ ವಹಿವಾಟು ಹೊಂದಿರಬೇಕು ಎಂಬುದಾಗಿರುತ್ತದೆ ಆದರೆ FINCURO SOLUTIONS Pvt Ltd Trivandrum ಕಂಪನಿಯು ರೂ.25.00 ಕೋಟಿಗಳ ವ್ಯವಹಾರ ಹೊಂದಿಬೇಕು ಎಂಬುದಾಗಿರುತ್ತದೆ. ಆದಾಗ್ಯೂ RFP ಯಲ್ಲಿ ಹೇಳಿರುವ ಷರತ್ತುಗಳನ್ನು ಪಾಲನೆ ಮಾಡದೆ ಇರುವುದು ಕಂಡುಬಂದಿರುತ್ತದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಸಿ.ಬಿ.ಎಸ್ ಅಳವಡಿಕೆ ಸಂಬಂಧ ಬ್ಯಾಂಕು ನಡೆಸಿರುವ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಗಮನಿಸಲಾಗಿರುತ್ತದೆ.



Scanned with CamScanner

n Pvt Ltd.,

**ಆರೋಪ-2. ಬ್ಯಾಂಕಿನಲ್ಲಿ ಭದ್ರತಾ ವ್ಯವಸ್ಥೆಗಾಗಿ ವಾರ್ಷಿಕ ಸುಮಾರು ರೂ.200.00 ಲಕ್ಷಗಳನ್ನು ವೆಚ್ಚ ಮಾಡುತ್ತಿದ್ದು, ಕಳೆದ 08 ರಿಂದ 10 ವರ್ಷಗಳಿಂದ ಕೆ.ಟಿ.ಟಿ.ಪಿ ಕಾಯ್ದೆ ಪ್ರಕಾರ ಟೆಂಡರ್ ಕರೆಯದೇ ಒಂದೇ ಏಜೆನ್ಸಿಯವರಿಗೆ ಗುತ್ತಿಗೆ ನೀಡಿರುವ ಬಗ್ಗೆ.**

ಸದರಿ ಆರೋಪದ ಕುರಿತು ತನಿಖಾ ತಂಡವು ಬ್ಯಾಂಕಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಲಾಗಿರುತ್ತದೆ. ಈ ಆರೋಪದ ಸಂಬಂಧ 2009 ನೇ ಸಾಲಿನಿಂದ ತಹಲ್‌ವರೆವಿಗಿನ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಬ್ಯಾಂಕಿಗೆ ಭದ್ರತಾ ಸಿಬ್ಬಂಧಿ ಒದಗಿಸುವ ಬಗ್ಗೆ ದಿನಾಂಕ:30.09.2009 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ:09 ರಲ್ಲಿ ಚರ್ಚೆ ನಡೆಸಿದ್ದು ಈ ಬಗ್ಗೆ ಕ್ರಮ ಕೈಗೊಳ್ಳಲು ಬ್ಯಾಂಕಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ತೀರ್ಮಾನಿಸಿರುವುದು ಕಂಡುಬಂದಿರುತ್ತದೆ. (ಅನುಬಂಧ-20) ನಂತರ ದಿನಾಂಕ:13.11.2009 ರಂದು ಬ್ಯಾಂಕಿನ ಪರವಾಗಿ ವ್ಯವಸ್ಥಾಪಕ ನಿರ್ದೇಶಕರು ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185, ಬಾಪೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ ಭದ್ರತಾ ಸಿಬ್ಬಂಧಿ ಒದಗಿಸುವ ಕುರಿತು ದಿನಾಂಕ:01.12.2009 ರಿಂದ ದಿನಾಂಕ:30.11.2011 ರವರೆವಿಗೆ ಒಟ್ಟು 2 ವರ್ಷಗಳ ಅವಧಿಗೆ ಗುತ್ತಿಗೆ ಕರಾರು ಮಾಡಿಕೊಂಡಿರುತ್ತಾರೆ. (ಅನುಬಂಧ-21) ಈ ಕರಾರಿನ ಪ್ರಕಾರ 1ನೇ ಪಾರ್ಟಿಯಾದ ಬ್ಯಾಂಕಿಗೆ 79.5 ಮಂದಿ ಭದ್ರತಾ ಸಿಬ್ಬಂಧಿಗೆ ಒಂದು ಪಾಳಿಗೆ (Shift) 8 ಗಂಟೆಯಂತೆ ತಿಂಗಳೊಂದಕ್ಕೆ ಭದ್ರತಾ ಸಿಬ್ಬಂಧಿ ಒಬ್ಬರಿಗೆ ರೂ.4331.54 ದರದಲ್ಲಿ ಗುತ್ತಿಗೆ ಆಧಾರದ ಮೇಲೆ ಪಾವತಿ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ.

ಸದರಿ ಕರಾರರು ಅವಧಿಯು ಮುಕ್ತಾಯವಾಗುವ ಮುನ್ನಾ ದಿನಾಂಕ:19.10.2011 ರಂದು ಮತ್ತೊಮ್ಮೆ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185, ಬಾಪೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ರವರು ಗುತ್ತಿಗೆ ಕರಾರು ಒಪ್ಪಂದ ಮಾಡಿಕೊಂಡಿದ್ದು ಈ ಕಾರಿರನ ಪ್ರಕಾರ 1ನೇ ಪಾರ್ಟಿಯಾದ ಬ್ಯಾಂಕಿಗೆ 85.5 ಮಂದಿ ಭದ್ರತಾ ಸಿಬ್ಬಂಧಿಗೆ ಒಂದು ಪಾಳಿಗೆ (Shift) 8 ಗಂಟೆಯಂತೆ ತಿಂಗಳೊಂದಕ್ಕೆ ಭದ್ರತಾ ಸಿಬ್ಬಂಧಿ ಒಬ್ಬರಿಗೆ ರೂ.4732.38 ದರದಲ್ಲಿ ಹಾಗೂ ಸೇವಾ ತೆರಿಗೆ ಪ್ರತ್ಯೇಕವಾಗಿ ದಿನಾಂಕ:01.11.2011 ರಿಂದ 30.11.2014 ರವರೆವಿಗೆ ಒಟ್ಟು 3 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪಾವತಿ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. (ಅನುಬಂಧ-22)

ಈ ಕರಾರು ಒಪ್ಪಂದ ಮಾಡಿಕೊಂಡ ನಂತರ ಸದರಿ ಕರಾರಿನ ಬಗ್ಗೆ ದಿನಾಂಕ:02.11.2011 ರಂದು ಜರುಗಿದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ:12 ರಲ್ಲಿ ಚರ್ಚಿಸಿ ಘಟನೋತ್ತರ ಅನುಮತಿ ನೀಡಿರುವುದು ಕಂಡುಬಂದಿರುತ್ತದೆ. (ಅನುಬಂಧ-23)

ನಂತರ ಸದರಿ ಕರಾರು ಮುಕ್ತಾಯಗೊಳ್ಳುವ ಪೂರ್ವದಲ್ಲಿ ದಿನಾಂಕ:10.11.2014 ರಂದು ಜರುಗಿದ ಆಡಳಿತ ಮಂಡಳಿಯ ವಿಷಯ ಸಂಖ್ಯೆ:11 ರಲ್ಲಿ ಚರ್ಚೆ ನಡೆಸಿದ್ದು ದಿನಾಂಕ:01.12.2014 ರಿಂದ 30.11.2017 ರವರೆವಿಗೆ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185, ಬಾಪೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ 3 ವರ್ಷಗಳ ಅವಧಿಗೆ ಕರಾರು ಮಾಡಿಕೊಂಡು ಮುಂದುವರೆಸಲು ತೀರ್ಮಾನಿಸಿರುವುದು ಕಂಡುಬಂದಿರುತ್ತದೆ. (ಅನುಬಂಧ-24) ಅದರಂತೆ ದಿನಾಂಕ:21.11.2014 ರಂದು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185, ಬಾಪೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ ದಿನಾಂಕ:01.12.2014 ರಿಂದ 30.11.2017 ರವರೆಗೆ 3 ವರ್ಷಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ. (ಅನುಬಂಧ-25) ಈ ಕರಾರಿನ ಪ್ರಕಾರ 1ನೇ ಪಾರ್ಟಿಯಾದ ಬ್ಯಾಂಕಿಗೆ 87 ಮಂದಿ ಭದ್ರತಾ ಸಿಬ್ಬಂಧಿಗೆ ಒಂದು ಪಾಳಿಗೆ (Shift) 8



Scanned with CamScanner

ಗಂಟೆಯಂತೆ ತಿಂಗಳೊಂದಕ್ಕೆ ಭದ್ರತಾ ಸಿಬ್ಬಂಧಿ ಒಬ್ಬರಿಗೆ ರೂ.9100.00 ದರದಲ್ಲಿ ಸೇವಾ ತೆರಿಗೆ ಪ್ರತ್ಯೇಕವಾಗಿ ದಿನಾಂಕ:01.12.2014 ರಿಂದ 30.11.2017 ರವರೆಗೆ ಒಟ್ಟು 3 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪಾವತಿ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಈ ಕರಾರಿನ ಅವಧಿಯು ಮುಕ್ತಾಯವಾದ ನಂತರ ಸದರಿ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ ದಿನಾಂಕ:09.02.2018 ರಂದು ಬ್ಯಾಂಕಿನ ಪರವಾಗಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಭದ್ರತಾ ಸಿಬ್ಬಂದಿ ಒದಗಿಸುವ ಕುರಿತು ಮುಂದುವರೆಸಲು ಗುತ್ತಿಗೆ ಕರಾರು ಮಾಡಿಕೊಂಡಿರುತ್ತಾರೆ. (ಅನುಬಂಧ-26) ಆದರೆ ದಿನಾಂಕ:01.12.2017 ರಿಂದ 08.02.2018 ರವರೆಗಿನ ಅವಧಿಗೆ ಭದ್ರತಾ ಸಿಬ್ಬಂದಿ ಒದಗಿಸುವ ಕುರಿತು ಕರಾರು ಮಾಡಿಕೊಂಡಿರುವುದಿಲ್ಲ. ಈ ಅವಧಿಗೆ ಮುಂದುವರೆಸುವ ಕುರಿತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ರವರು ದಿನಾಂಕ:01.12.2017ರ ಪತ್ರದಲ್ಲಿ ಭದ್ರತಾ ಸಿಬ್ಬಂದಿ ಒದಗಿಸುವ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ಇವರಿಗೆ ದಿನಾಂಕ:01.12.2017 ರಿಂದ ಮುಂದಿನ ಆದೇಶದವರೆಗೆ ದಿನಾಂಕ:21.11.2014 ರಂದು ಮಾಡಿಕೊಂಡ ಗುತ್ತಿಗೆ ಕರಾರಿನ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮುಂದುವರೆಸಿರುತ್ತಾರೆ. (ಅನುಬಂಧ-27) ಈ ಬಗ್ಗೆ ಬ್ಯಾಂಕಿನ ದಾಖಲೆಗಳನ್ನು ಪರಿಶೀಲಿಸಲಾಗಿ, ಬ್ಯಾಂಕಿಗೆ ಭದ್ರತಾ ಸಿಬ್ಬಂದಿ ಒದಗಿಸುವ ಕುರಿತು ತೀರ್ಮಾನ ತೆಗೆದುಕೊಳ್ಳಲು ದಿನಾಂಕ:08.11.2017 ರಂದು ನಡೆಯಬೇಕಾಗಿದ್ದ ಆಡಳಿತ ಮಂಡಳಿ ಸಭೆಯು ಕಾರಣಾಂತರಗಳಿಂದ ಜರುಗದೇ ಇದ್ದ ಪ್ರಯುಕ್ತ ಈಗಾಗಲೇ ಭದ್ರತಾ ಸಿಬ್ಬಂದಿ ಒದಗಿಸುತ್ತಿರುವ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ಇವರರೊಂದಿಗೆ ಮಾಡಿಕೊಂಡಿರುವ ಕರಾರನ್ನು ಮುಂದೆ ಆಡಳಿತ ಮಂಡಳಿ ಸಭೆ ಸೇರಿ ಸೂಕ್ತ ರೀತಿಯಲ್ಲಿ ಪಾರದರ್ಶಕ ಕಾಯಿದೆಯಡಿ ತೀರ್ಮಾನಿಸುವ ತನಕ ಮುಂದುವರಿಸುವ ಕುರಿತು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಅಧ್ಯಕ್ಷರಿಗೆ ಟಿಪ್ಪಣಿ ಮಂಡಿಸಿದ್ದು, ಸದರಿ ಟಿಪ್ಪಣಿಯನ್ನು ಅನುಮೋದಿಸಿರುತ್ತಾರೆ. (ಅನುಬಂಧ-28) ಸದರಿ ಅನುಮೋದನೆಗೊಂಡ ಟಿಪ್ಪಣಿ ರೀತ್ಯಾ ಭದ್ರತಾ ಸಿಬ್ಬಂಧಿಯ ಸೇವೆಯನ್ನು ದಿನಾಂಕ:01.12.2017 ರಿಂದ ಮುಂದಿನ ಆದೇಶದವರೆಗೆ (ತಾತ್ಕಾಲಿಕ) ಮುಂದುವರೆಸಲು ದಿನಾಂಕ:01.12.2017 ರ ಪತ್ರದಲ್ಲಿ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ರವರಿಗೆ ಆದೇಶಿಸಿರುತ್ತಾರೆ.

ನಂತರ ದಿನಾಂಕ:31.01.2018 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ 18 ರಲ್ಲಿ ಚರ್ಚೆ ನಡೆಸಿದ್ದು, (ಅನುಬಂಧ-29) ಒಂದು ವೇಳೆ ಇ-ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿದರೆ ಟೆಂಡರ್ ಪ್ರಕ್ರಿಯೆ ಹಾಗೂ ಪರಿಷ್ಕರಣೆಯಾಗಿರುವ ಕನಿಷ್ಟ ವೇತನ ಕಾಯಿದೆ ಪ್ರಕಾರ ಹೆಚ್ಚಿನ ಆರ್ಥಿಕ ವೆಚ್ಚ ಬರುವುದರಿಂದ ಪ್ರಸಕ್ತ ಭದ್ರತಾ ಸೇವೆ ಸಲ್ಲಿಸುತ್ತಿರುವ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ರವರು ಈಗ ಬ್ಯಾಂಕ್ ನೀಡುತ್ತಿರುವ ವೇತನಕ್ಕೆ ಒಪ್ಪಿದ್ದಲ್ಲಿ ಮುಂದಿನ ಎರಡು ವರ್ಷಗಳ ಅವಧಿಗೆ ಬ್ಯಾಂಕಿನ ಭದ್ರತಾ ಸಿಬ್ಬಂದಿಯ ಸೇವೆಯನ್ನು ನೀಡುವುದಕ್ಕೆ ಸಭೆಯು ಒಪ್ಪಿಗೆ ಸೂಚಿಸಿ ಸದರಿಯವರೊಂದಿಗೆ ಸೂಕ್ತ ಒಪ್ಪಂದ ಮಾಡಿಕೊಳ್ಳಲು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ಅಧಿಕಾರ ನೀಡಲು ತೀರ್ಮಾನಿಸಿರುವುದು ಕಂಡುಬಂದಿರುತ್ತದೆ. ಅದರಂತೆ ದಿನಾಂಕ:09.02.2018 ರಂದು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ ದಿನಾಂಕ:01.03.2018 ರಿಂದ 28.02.2020 ರವರೆಗೆ ಒಟ್ಟು 02 ವರ್ಷಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ. ಈ ಕರಾರಿನ ಪ್ರಕಾರ 1ನೇ ಪಾರ್ಟಿಯಾದ ಬ್ಯಾಂಕಿಗೆ 99 ಮಂದಿ ಭದ್ರತಾ ಸಿಬ್ಬಂಧಿಗೆ ಒಂದು ಪಾಳಿಗೆ (Shift) 8 ಗಂಟೆಯಂತೆ ತಿಂಗಳೊಂದಕ್ಕೆ ಭದ್ರತಾ ಸಿಬ್ಬಂಧಿ ಒಬ್ಬರಿಗೆ ರೂ.11681-00 ದರದಲ್ಲಿ ಸೇವಾ ತೆರಿಗೆ ಪ್ರತ್ಯೇಕವಾಗಿ ಪಾವತಿ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಈ ಕರಾರಿನ ಅವಧಿಯು ಮುಕ್ತಾಯಗೊಳ್ಳುವ ಪೂರ್ವದಲ್ಲಿ ಅಂದರೆ ದಿನಾಂಕ:20.12.2019 ರಂದು ನಡೆದ ಆಡಳಿತ ಮಂಡಳಿ ಸಭೆಯ



Scanned with CamScanner

ವಿಷಯ ಸಂಖ್ಯೆ 24 ರಲ್ಲಿ ಚರ್ಚೆ ನಡೆಸಿದ್ದು, (ಅನುಬಂಧ-30) ಒಂದು ವೇಳೆ ಇ-ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿದರೆ ಟೆಂಡರ್ ಪ್ರಕ್ರಿಯೆ ಹಾಗೂ ಪರಿಷ್ಕರಣೆಯಾಗಿರುವ ಕನಿಷ್ಠ ವೇತನ ಕಾಯಿದೆ ಪ್ರಕಾರ ಹೆಚ್ಚಿನ ಆರ್ಥಿಕ ವೆಚ್ಚ ಬರುವುದರಿಂದ ಪ್ರಸಕ್ತ ಭದ್ರತಾ ಸೇವೆ ಸಲ್ಲಿಸುತ್ತಿರುವ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ರವರು ಈಗ ಬ್ಯಾಂಕ್ ನೀಡುತ್ತಿರುವ ವೇತನಕ್ಕೆ ಒಪ್ಪಿದ್ದಲ್ಲಿ ಮುಂದಿನ ಹತ್ತು ತಿಂಗಳ ಅವಧಿಗೆ ಅಂದರೆ ದಿನಾಂಕ:31.12.2020 ರವರೆಗೆ ಬ್ಯಾಂಕಿನ ಭದ್ರತಾ ಸಿಬ್ಬಂದಿಯ ಸೇವೆಯನ್ನು ನೀಡುವುದಕ್ಕೆ ಸಭೆಯು ಒಪ್ಪಿಗೆ ಸೂಚಿಸಿ ಸದರಿಯವರೊಂದಿಗೆ ಸೂಕ್ತ ಒಪ್ಪಂದ ಮಾಡಿಕೊಳ್ಳಲು ಸಭೆಯು ಒಪ್ಪಿ ತೀರ್ಮಾನಿಸಿರುವುದು ಕಂಡುಬಂದಿರುತ್ತದೆ. ಅದರಂತೆ ದಿನಾಂಕ:25.01.2020 ರಂದು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಯವರು ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ ದಿನಾಂಕ:01.03.2020 ರಿಂದ 31.12.2020 ರವರೆಗೆ ಒಟ್ಟು 10 ತಿಂಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ. (ಅನುಬಂಧ-31) ಈ ಕರಾರಿನ ಪ್ರಕಾರ 1ನೇ ಪಾರ್ಟಿಯಾದ ಬ್ಯಾಂಕಿಗೆ 99 ಮಂದಿ ಭದ್ರತಾ ಸಿಬ್ಬಂಧಿಗೆ ಹಾಗೂ ಒಂದು ಗನ್ ಮ್ಯಾನ್‌ಗೆ ಒಂದು ಪಾಳಿಗೆ (Shift) 8 ಗಂಟೆಯಂತೆ ತಿಂಗಳೊಂದಕ್ಕೆ ಭದ್ರತಾ ಸಿಬ್ಬಂಧಿ ಒಬ್ಬರಿಗೆ ರೂ.11681.00 ದರದಲ್ಲಿ ಸೇವಾ ತೆರಿಗೆ ಪ್ರತ್ಯೇಕವಾಗಿ ಹಾಗೂ ಒಬ್ಬ ಗನ್ ಮ್ಯಾನ್‌ಗೆ ತಿಂಗಳೊಂದಕ್ಕೆ ರೂ.17,981.00 ಗಳ ದರದಲ್ಲಿ ಹಾಗೂ ಸೇವ ತೆರಿಗೆ ಪ್ರತ್ಯೇಕವಾಗಿ ಪಾವತಿ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ.

2009ನೇ ಸಾಲಿನಿಂದ 2020ನೇ ಸಾಲಿನವರೆಗೆ ಭದ್ರತಾ ಸಿಬ್ಬಂದಿ ಸೇವೆಯನ್ನು ಒದಗಿಸುವ ಕುರಿತಂತೆ ಬ್ಯಾಂಕಿನ ವತಿಯಿಂದ ಸಲ್ಲಿಸಿರುವ ದಾಖಲಾತಿಗಳ ಪ್ರಕಾರ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ಇವರೊಂದಿಗೆ ಗುತ್ತಿಗೆ ಕರಾರನ್ನು ಆಡಳಿತ ಮಂಡಳಿಯ ನಿರ್ಣಯದಂತೆ ಮಾತ್ರ ಮಾಡಿಕೊಂಡಿರುತ್ತಾರೆ ವಿನಹ: ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮ 2000ದಡಿ ನಿಯಮಾನುಸಾರ ಬ್ಯಾಂಕಿಗೆ ಭದ್ರತಾ ಸಿಬ್ಬಂದಿಯನ್ನು ಒದಗಿಸುವ ಸಂಸ್ಥೆಯನ್ನು ನೇಮಕ ಮಾಡಿಕೊಳ್ಳಲು ವಿಫಲರಾಗಿರುವುದು ಕಂಡು ಬಂದಿರುತ್ತದೆ ಮತ್ತು ಕನಿಷ್ಠ ವೇತನ ಕಾಯ್ದೆ ಉಲ್ಲಂಘನೆಯಾಗಿರುವುದು ಕಂಡುಬಂದಿರುತ್ತದೆ.

ಬ್ಯಾಂಕಿಗೆ ಭದ್ರತಾ ಸಿಬ್ಬಂದಿ ಒದಗಿಸುವ ಸಂಸ್ಥೆಯಾದ ಮೇ.ವಿ ಅಂಡ್ ವಿ ಅಸೋಸಿಯೇಟ್ಸ್ ನಂ.185. ಬಾಮೂಜಿ ಬಡಾವಣೆ, ಬೆಂಗಳೂರು ಇವರು ದಿನಾಂಕ:02.05.2020ರ ಪತ್ರದೊಂದಿಗೆ ನೀಡಿರುವ ದಿನಾಂಕ:30.04.2020ರ ಇನ್‌ವಾಯ್ಸ್ ಪ್ರತಿಯನ್ನು ಪರಿಶೀಲಿಸಲಾಗಿ ದಿನಾಂಕ.01.04.2020ರಿಂದ 30.04.2020ರ ಅವಧಿಯಲ್ಲಿ ಒಟ್ಟು 99 ಜನ ಭದ್ರತಾ ಸಿಬ್ಬಂದಿ, ಒಂದು ಗನ್ ಮ್ಯಾನ್ (ದಿನಗಳಲ್ಲಿ), ಗೆಜ್ಜಲಗೆರೆ ಗನ್ ಮ್ಯಾನ್(12ಗಂಟೆಗಳು) ಮತ್ತು ಹೆಚ್ಚುವರಿ ಭದ್ರತಾ ಸಿಬ್ಬಂದಿ ಗೆಜ್ಜಲಗೆರೆ 9 ದಿನಗಳು (12ಗಂಟೆ) ಈ ರೀತಿ ಇನ್ ವಾಯ್ಸ್ ನೀಡಿದ್ದು, ದಿನಾಂಕ25.01.2020ರಂದು ಮಾಡಿಕೊಂಡ ಗುತ್ತಿಗೆ ಕರಾರಿಗೆ ಹೆಚ್ಚುವರಿಯಾಗಿ ರೂ. 32,197-00ಗಳು (ಜಿಎಸ್‌ಟಿ ಹೊರತ್ತುಪಡಿಸಿ) ಈ ಇನ್‌ವಾಯ್ಸ್ ನೀಡಿರುವುದು ಕಂಡು ಬಂದಿರುತ್ತದೆ. (ಅನುಬಂಧ-32) ಈ ಹೆಚ್ಚುವರಿ ಗೆಜ್ಜಲಗೆರೆ ಗನ್ ಮ್ಯಾನ್(12ಗಂಟೆಗಳು) ಮತ್ತು ಹೆಚ್ಚುವರಿ ಭದ್ರತಾ ಸಿಬ್ಬಂದಿ ಗೆಜ್ಜಲಗೆರೆ 9 ದಿನಗಳು (12ಗಂಟೆ) ಸೇವೆಗೆ ಸಂಬಂಧಪಟ್ಟಂತೆ ಆಡಳಿತ ಮಂಡಳಿಯಲ್ಲಿ ಯಾವುದೇ ನಿರ್ಣಯ ಕೈಗೊಂಡಿರುವುದು ಹಾಗೂ ನಿಯಮಾನುಸಾರ ಗುತ್ತಿಗೆ ಕರಾರು ಮಾಡಿಕೊಂಡಿರುವುದು ಕಂಡು ಬಂದಿರುವುದಿಲ್ಲ.

<u>ಆರೋಪ-3: ಬ್ಯಾಂಕಿನಲ್ಲಿ ಯಾವುದೇ ನಿಯಮಗಳನ್ನು ಅನುಸರಿಸದೇ ಪೀಠೋಪಕರಣ ಮತ್ತು ಲೇಖನಾ ಸಾಮಾಗ್ರಿ ಖರೀದಿಸಿರುವ ಬಗ್ಗೆ.</u>

<u>ಲೇಖನಾ ಸಾಮಾಗ್ರಿ ಖರೀದಿ</u>



Scanned with CamScanner

ಸದರಿ ಆರೋಪದ ಕುರಿತು ತನಿಖಾ ತಂಡವು ಬ್ಯಾಂಕಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಲಾಗಿರುತ್ತದೆ. ಬ್ಯಾಂಕಿನಲ್ಲಿ 2015-16ನೇ ಸಾಲಿನಿಂದ 2019-20ನೇ ಸಾಲಿನವರೆವಿಗೆ ಈ ಕೆಳಕಂಡಂತೆ ಮುದ್ರಣಾ ಮತ್ತು ಲೇಖನಾ ಸಾಮಾಗ್ರಿಗಳನ್ನು ಖರೀದಿಸಲಾಗಿರುತ್ತದೆ. (ಅನುಬಂಧ-33)

| ಕ್ರ.ಸಂ | ವರ್ಷವಾರು ವಿವರ | ಮೊಬಲಗು |
|---|---|---|
| 1 | 2015-16 | ರೂ.19,03,382.00 |
| 2 | 2016-17 | ರೂ.20,20,396.22 |
| 3 | 2017-18 | ರೂ.1,52,12,667.00 |
| 4 | 2018-19 | ರೂ.35,90,058.00 |
| 5 | 2019-20 | ರೂ.16,08,137.00 |

2015-16ನೇ ಸಾಲಿನಿಂದ 2019-20ನೇ ಸಾಲಿನವರೆವಿಗೆ ಬ್ಯಾಂಕಿನ ಶಾಖೆಗಳಿಂದ ಹಾಗೂ ಪ್ರಧಾನ ಕಛೇರಿಯ ಬೇಡಿಕೆಗೆ ಅನುಗುಣವಾಗಿ ಮುದ್ರಣಾ ಮತ್ತು ಲೇಖನಾ ಸಾಮಗ್ರಿಗಳ ಪಟ್ಟಿಯನ್ನು ಪಡೆದು ಕ್ರೋಢೀಕರಿಸಿ ಆಡಳಿತ ಮಂಡಳಿ ಸಭೆಯಲ್ಲಿ ಮತ್ತು ಖರೀದಿ ಉಪಸಮಿತಿ ಸಭೆಯಲ್ಲಿ ಮತ್ತು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಿ ಟೆಂಡರ್/ಕೊಟೇಶನ್ ಮೂಲಕ ಮುದ್ರಣಾ ಮತ್ತು ಲೇಖನಾ ಸಾಮಾಗ್ರಿಗಳನ್ನು ಪಾರದರ್ಶಕ ಕಾಯ್ದೆ ರೀತ್ಯಾ ಖರೀದಿಸಲು ತೀರ್ಮಾನಿಸಿರುವುದು ಕಂಡುಬಂದಿರುತ್ತದೆ ಹಾಗೂ ಈ ಬಗ್ಗೆ ಪ್ರಜಾವಾಣಿ, ಆಂದೋಲನ, ಮೈಸೂರು ಮಿತ್ರ, ಪ್ರಜಾನುಡಿ ಮತ್ತು ಕನ್ನಂಬಾಡಿ ದಿನಪತ್ರಿಕೆಗಳಲ್ಲಿ ಟೆಂಡರ್ ಕರೆದಿರುವ ಬಗ್ಗೆ ಪ್ರಕಟಿಸಲಾಗಿರುತ್ತದೆ. ನಂತರ ಟೆಂಡರ್ ಕರೆದು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಮಕ್ಷಮದಲ್ಲಿ ತೆರೆದು ಕಡಿಮೆ ದರ ನಿಗಧಿಪಡಿಸಿದ ಏಜೆನ್ಸಿಯವರಿಗೆ ಲೇಖನಾ ಸಾಮಾಗ್ರಿಗಳ ಸರಬರಾಜಿಗೆ ಕಾರ್ಯಾದೇಶ ನೀಡಿರುವುದು ಕಂಡುಬಂದಿರುತ್ತದೆ. (ಅನುಬಂಧ-34) 2017-18ನೇ ಸಾಲಿನಲ್ಲಿ ಮುದ್ರಣ ಮತ್ತು ಲೇಖನಾ ಸಾಮಾಗ್ರಿಗಳ ಖರೀದಿ ಲೆಕ್ಕದಲ್ಲಿ ಒಟ್ಟು ರೂ. 1,52,12,667.00ಗಳ ವೆಚ್ಚದ ಪೈಕಿ ಬ್ಯಾಂಕಿನಿಂದ ಎಟಿಎಂ ಕಾರ್ಡ್ ತಯಾರಿಕೆಗಾಗಿ ರೂ.1,14,08,000.00ಗಳ ವೆಚ್ಚವಾಗಿದ್ದು, ಸದರಿ ಈ ವೆಚ್ಚದ ಲೆಕ್ಕವು ಕಂಪ್ಯೂಟರ್ ವಿಭಾಗದ ಲೆಕ್ಕವಾಗಿರುತ್ತದೆ ಎಂದು ಬ್ಯಾಂಕಿನ ಅಧಿಕಾರಿಗಳು ತಿಳಿಸಿದ್ದು, ಸದರಿ ಲೆಕ್ಕವನ್ನು ಹೊರತುಪಡಿಸಿದರೆ, ರೂ.38,04,667.00ಗಳ ವೆಚ್ಚವು ಮುದ್ರಣ ಮತ್ತು ಲೇಖನಾ ಸಾಮಾಗ್ರಿಗಳ ಖರೀದಿಗಾಗಿ ಮಾಡಿರುವ ವೆಚ್ಚವಾಗಿರುತ್ತದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮ 2000 ರಡಿಯಲ್ಲಿ ರೂ.5.00 ಲಕ್ಷಗಳನ್ನು ಮೀರಿ ಲೇಖನಾ ಮತ್ತು ಮುದ್ರಣ ಸಾಮಾಗ್ರಿಗಳನ್ನು ಖರೀದಿಸಬೇಕಾದಲ್ಲಿ ಇ-ಟೆಂಡರ್ ಕರೆಯುವ ಮುಖಾಂತರ ಬ್ಯಾಂಕಿಗೆ ಅವಶ್ಯವಿರುವ ಮುದ್ರಣಾ ಮತ್ತು ಲೇಖನಾ ಸಾಮಾಗ್ರಿಗಳನ್ನು ಖರೀದಿಸಬೇಕಾಗಿರುತ್ತದೆ ಆದರೆ ಪ್ರಸ್ತುತ ಸದರಿ ಬ್ಯಾಂಕಿನಲ್ಲಿ 2015-16ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಪಾರದರ್ಶಕ ಕಾಯಿದೆಯಂತೆ ರೂ.5.00 ಲಕ್ಷಗಳಿಗೆ ಮೇಲ್ಪಟ್ಟು ಮುದ್ರಣ ಮತ್ತು ಲೇಖನಾ ಸಾಮಾಗ್ರಿಗಳನ್ನು ಇ-ಟೆಂಡರ್ ಮೂಲಕ ಟೆಂಡರ್ ಕರೆಯದೆ ಆಡಳಿತ ಮಂಡಳಿಯ ನಿರ್ಣಯಕ್ಕೆ ವ್ಯತಿರಿಕ್ತವಾಗಿ ಕೇವಲ ದಿನಪತ್ರಿಕೆಯಲ್ಲಿ ಪ್ರಕಟಿಸಿ ಹಸ್ತಚಾಲಿತ (Manual) ಟೆಂಡರ್ ಕರೆಯುವ ಮುಖಾಂತರ ಮುದ್ರಣ ಮತ್ತು ಲೇಖನಾ ಸಾಮಾಗ್ರಿಗಳನ್ನು ಪ್ರತಿ ವರ್ಷ ಖರೀದಿಸಿರುವುದು ಕರ್ನಾಟಕ ಪಾರದರ್ಶಕ ಕಾಯ್ದೆ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿರುತ್ತದೆ ಎಂದು ಅಭಿಪ್ರಾಯಿಸಿದೆ.

<u>ಪೀಠೋಪಕರಣಗಳ ಖರೀದಿ:</u>



Scanned with CamScanner

ಸದರಿ ಆರೋಪದ ಕುರಿತು ತನಿಖಾ ತಂಡವು ಬ್ಯಾಂಕಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಲಾಗಿರುತ್ತದೆ. ಬ್ಯಾಂಕಿನಲ್ಲಿ 2015-16ನೇ ಸಾಲಿನಿಂದ 2019-20ನೇ ಸಾಲಿನವರೆವಿಗೆ ಶಾಖೆಗಳಿಗೆ ಹಾಗೂ ಪ್ರಧಾನ ಕಛೇರಿಗೆ ಅವಶ್ಯಕತೆಗೆ ಅನುಗುಣವಾಗಿ ಈ ಕೆಳಕಂಡಂತೆ ಪೀಠೋಪಕರಣಗಳನ್ನು ಖರೀದಿಸಿರುವುದು ಕಂಡುಬರುತ್ತದೆ. (ಅನುಬಂಧ-35)

| ಕ್ರ.ಸಂ | ವರ್ಷವಾರು ವಿವರ | ಮೊಬಲಗು |
|---|---|---|
| 1 | 2015-16 | ರೂ.80,000.00 |
| 2 | 2016-17 | ರೂ.11,90,117.00 |
| 3 | 2017-18 | ರೂ.36,48,395.00 |
| 4 | 2018-19 | ರೂ.34,600.00 |
| 5 | 2019-20 | ರೂ.3,77,600.00 |

ಈ ಮೇಲ್ಕಂಡಂತೆ 2015-16 ನೇ ಸಾಲಿನಲ್ಲಿ ಬ್ಯಾಂಕಿನ ದೇವಲಾಪುರ ಶಾಖೆಗೆ ಸಂಬಂಧಿಸಿದಂತೆ ಪೀಠೋಪಕರಣ ಹಾಗೂ ಸ್ಟ್ರಾಂಗ್ ರೂಂ ಈಗಾಗಲೇ ಸದರಿ ಕಟ್ಟಡದಲ್ಲಿ ವಿಜಯಾ ಬ್ಯಾಂಕ್ ಕಾರ್ಯನಿರ್ವಹಿಸುತ್ತಿದ್ದು ತೆರವುಗೊಳಿಸುವ ಸಮಯದಲ್ಲಿ ಪೀಠೋಪಕರಣ ಹಾಗೂ ಸ್ಟ್ರಾಂಗ್ ರೂಂ ಡೋರ್‌ನ್ನು ರೂ.80,000.00 ಗಳಿಗೆ ಖರೀದಿಸಲು ದಿನಾಂಕ:13.10.2015 ರಂದು ನಡೆದ ಕಟ್ಟಡ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಿ ರೂ.80,000.00 ಗಳ ಡಿಡಿ ಯನ್ನು ನೀಡಿರುತ್ತಾರೆ ಆದರೆ ವಿಜಯಾ ಬ್ಯಾಂಕಿನಿಂದ ಪೀಠೋಪಕರಣ ಮತ್ತು ಸ್ಟ್ರಾಂಗ್ ರೂಂ ಡೋರ್ ಖರೀದಿಸುವ ಪೂರ್ವದಲ್ಲಿ ಸಂಬಂಧಪಟ್ಟ ಮೌಲ್ಯಮಾಪಕರಿಂದ ಯಾವುದೇ ಮೌಲ್ಯಮಾಪನ ಮಾಡಿಸಿ ಖರೀದಿಸಿರುವುದು ಕಂಡುಬಂದಿರುವುದಿಲ್ಲ. (ಅನುಬಂಧ-36)

2016-17ನೇ ಸಾಲಿನಲ್ಲಿ ಹಲಗೂರು ಶಾಖೆಯ ಕಟ್ಟಡಕ್ಕೆ ಸ್ಟ್ರಾಂಗ್ ರೂಂ ಅಳವಡಿಸಲು ದಿನಾಂಕ:06.08.2016 ರಂದು ನಡೆದ ಖರೀದಿ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಿ ರೂ.1,30,510.00 ವೆಚ್ಚಕ್ಕೆ ಕೊಟೇಷನ್ ಪಡೆದು ಸ್ವಾಮಿ ಇಂಜಿನಿಯರಿಂಗ್ ವರ್ಕ್ಸ್ ಮಂಡ್ಯ ಇವರಿಗೆ ಕಾರ್ಯಾದೇಶ ನೀಡಿರುತ್ತಾರೆ. ಆದರೆ ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ ನಿಯಮಾನುಸಾರ ಪಾರದರ್ಶಕ ಕಾಯ್ದೆಯಡಿ ಅನುಸರಿಸಿ ಕಾಮಗಾರಿಯನ್ನು ನೀಡಿರುವುದು ಕಂಡುಬಂದಿರುವುದಿಲ್ಲ. (ಅನುಬಂಧ-37)

ಬ್ಯಾಂಕಿನ ಹಲಗೂರು ಶಾಖೆಯ ನೂತನ ಕಟ್ಟಡಕ್ಕೆ ರೂ.5,63,628.00 ಗಳ ವೆಚ್ಚದಲ್ಲಿ ಕೌಂಟರ್ ಮತ್ತು ಪೀಠೋಪಕರಣಗಳನ್ನು ಅಳವಡಿಸುವ ಬಗ್ಗೆ ದಿನಾಂಕ:03.03.2016 ರಂದು ನಡೆದ ಕಟ್ಟಡ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಿ ಆಂದೋಲನ ಮತ್ತು ಮುಂಜಾನೆ ದಿನಪತ್ರಿಕೆಯಲ್ಲಿ ದಿನಾಂಕ: 10.04.2016 ರಂದು ಟೆಂಡರ್ ಪ್ರಕಟಣೆ ಹೊರಡಿಸಿ ಕಡಿಮೆ ದರಕ್ಕೆ ಟೆಂಡರ್ ಸಲ್ಲಿಸಿರುವ ಶಂಕರ್ ವುಡನ್ ಫರ್ನಿಚರ್ಸ್ ವರ್ಕ್ಸ್ ಮಂಡ್ಯ ಇವರಿಗೆ ಕಾರ್ಯಾದೇಶ ನೀಡಿರುವುದು ಕಂಡುಬಂದಿರುತ್ತದೆ. ಆದರೆ ನಿಯಮಾನುಸಾರ ಪಾರದರ್ಶಕ ಕಾಯ್ದೆಯಡಿ ಇ-ಟೆಂಡರ್ ನೀಡಿರುವುದು ಕಂಡುಬಂದಿರುವುದಿಲ್ಲ. (ಅನುಬಂಧ-38)

ಬ್ಯಾಂಕಿನ ನೂತನ ಶಾಖೆಗಳಾದ ಚಿಕ್ಕನಹಳ್ಳಿ, ಮದ್ದೂರು ರಾತ್ರಿ ಶಾಖೆ, ಮಂಡ್ಯ ತಾಲ್ಲೂಕು ಶಾಖೆ ಮತ್ತು ಕೆಸ್ತೂರು ಶಾಖೆಗಳಿಗೆ ಹೊಸದಾಗಿ ಸ್ಟ್ರಾಂಗ್ ರೂಂ, ಡೋರ್ ಖರೀದಿಸಿ ಅಳವಡಿಸಲು ದಿನಾಂಕ:28.11.2016 ರಂದು ನಡೆದ ಖರೀದಿ ಉಪ ಸಮಿತಿ ಸಭೆಯಲ್ಲಿ ತೀರ್ಮಾನಿಸಿ ತಲಾ ರೂ.1,12,210.00 ಗಳಂತೆ ಒಟ್ಟು ರೂ.4,42,840.00 ಗಳಿಗೆ ಖರೀದಿಸಲು ಈ ಹಿಂದೆ ಕೆಲಸ ನಿರ್ವಹಿಸಿದ ಸ್ವಾಮಿ ಇಂಜಿನಿಯರಿಂಗ್ ವರ್ಕ್ಸ್



Scanned with CamScanner

ಮಂಡ್ಯ ಇವರಿಂದ ಖರೀದಿಸಲು ತೀರ್ಮಾನಿಸಿ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗೆ ಅಧಿಕಾರ ನೀಡಲಾಗಿರುತ್ತದೆ. ಆದರೆ ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ ನಿಯಮಾನುಸಾರ ಪಾರದರ್ಶಕ ಕಾಯ್ದೆಯಡಿ ಟೆಂಡರ್/ಕೊಟೇಶನ್ ಪಡೆದು ಕಾಮಗಾರಿ ನೀಡಿರುವುದು ಕಂಡುಬಂದಿರುವುದಿಲ್ಲ. (ಅನುಬಂಧ-39)

2017-18ನೇ ಸಾಲಿನಲ್ಲಿ ಬ್ಯಾಂಕಿನ ಕೆಸ್ತೂರು ಶಾಖೆಗೆ ರೂ.3,97,177.00 ಗಳ ವೆಚ್ಚದಲ್ಲಿ ಕೌಂಟರ್ ಮತ್ತು ಪೀಠೋಪಕರಣಗಳನ್ನು ಅಳವಡಿಸುವ ಬಗ್ಗೆ ದಿನಾಂಕ:28.11.2016 ರಂದು ಖರೀದಿ ಉಪಸಮಿತಿ ಸಭೆಯಲ್ಲಿ ಟೆಂಡರ್ ಮತ್ತು ಕೊಟೇಶನ್ ಕರೆದು ಕಾಮಗಾರಿ ನಿರ್ವಹಿಸಲು ತೀರ್ಮಾನಿಸಿ ದಿನಪತ್ರಿಕೆಯಲ್ಲಿ ಟೆಂಡರ್ ಪ್ರಕಟಣೆ ನೀಡಿ ಟೆಂಡರ್ ಕರೆದು ಕಾವೇರಿ ಫರ್ನೀಚರ್ಸ್ ಮಂಡ್ಯ ರವರಿಗೆ ಕಾರ್ಯಾದೇಶ ನೀಡಿರುತ್ತಾರೆ. (ಅನುಬಂಧ-40)

ಬ್ಯಾಂಕಿನ ಬಿಕ್ಕನಹಳ್ಳಿ ಶಾಖೆಗೆ ರೂ.1,08,889.00 ಗಳಿಗೆ ಪೀಠೋಪಕರಣ ಹಾಗೂ ಕೋಲಾಪ್ಸಿಬಲ್ ಗೇಟ್ ಅಳವಡಿಸುವ ಸಂಬಂಧ ದಿನಾಂಕ:22.02.2017 ರಂದು ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನಿಸಿ ಬ್ಯಾಂಕಿನ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ಅಧಿಕಾರ ನೀಡಿರುತ್ತಾರೆ. ಆದರೆ ಪತ್ರಿಕಾ ಪ್ರಕಟಣೆ ಹೊರಡಿಸಿ ದರಪಟ್ಟಿ ಹಾಗೂ ಟೆಂಡರ್ ಪಡೆಯದೇ ಶಂಕರ್ ವುಡನ್ ಫರ್ನೀಚರ್ಸ್ ಇವರಿಗೆ ಕಾರ್ಯದೇಶ ನೀಡಿರುತ್ತಾರೆ. (ಅನುಬಂಧ-41)

ಬ್ಯಾಂಕಿನ ಮಂಡ್ಯ ತಾಲ್ಲೂಕು ಶಾಖೆಗೆ ಪೀಠೋಪಕರಣಗಳನ್ನು ಅಳವಡಿಸುವ ಸಂಬಂಧ ದಿನಾಂಕ:24.05.2017 ರಂದು ನಡೆದ ಖರೀದಿ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಿ ಟೆಂಡರ್ ಕರೆಯಲು ತೀರ್ಮಾನಿಸಲಾಗಿದೆ ಅದರಂತೆ ಪ್ರಜಾವಾಣಿ ಮತ್ತು ಆಂದೋಲನ ದಿನಪತ್ರಿಕೆಯಲ್ಲಿ ಟೆಂಡರ್ ಪ್ರಕಟಣೆಯನ್ನು ನೀಡಿ ಕಡಿಮೆ ದರ ನಿಗಧಿಪಡಿಸಿದ ಬಿ.ಕೆ.ತಮ್ಮೇಶ್ ಮಂಡ್ಯ ಇವರಿಗೆ ರೂ.4,36,814.00 ಗಳಿಗೆ ಕಾರ್ಯಾದೇಶ ನೀಡಿರುತ್ತಾರೆ. (ಅನುಬಂಧ-42)

ಬ್ಯಾಂಕಿನ ಮಂಡ್ಯ ತಾಲ್ಲೂಕು ಶಾಖೆಗೆ ಕೌಂಟರ್, ಮ್ಯಾನೇಜರ್ ಟೇಬಲ್, ಕ್ಯಾಷಿಯರ್ ಟೇಬಲ್, ಗ್ರಾಹಕರ ಚೇರುಗಳು ಮತ್ತು ಚಲನ್ ಟೇಬಲ್‌ಗಳನ್ನು ಅಳವಡಿಸುವ ಸಂಬಂಧ ದಿನಾಂಕ:24.05.2017 ರಂದು ನಡೆದ ಖರೀದಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿ ದಿನಪತ್ರಿಕೆಯಲ್ಲಿ ಟೆಂಡರ್ ಪ್ರಕಟಣೆಯನ್ನು ನೀಡಿ ಕಡಿಮೆ ದರ ನಮೂದಿಸಿದ ಕಾವೇರಿ ಫರ್ನೀಚರ್ಸ್ ಮಂಡ್ಯ ರವರಿಗೆ ರೂ.9,88,697.00 ಗಳಿಗೆ ಕಾರ್ಯಾದೇಶ ನೀಡಿರುತ್ತಾರೆ. ಆದರೆ ನಿಯಮಾನುಸಾರ ಪಾರದರ್ಶಕ ಕಾಯ್ದೆಯಡಿ ಇ-ಟೆಂಡರ್ ಕರೆದು ಕಾಮಗಾರಿ ನೀಡಿರುವುದು ಕಂಡುಬಂದಿರುವುದಿಲ್ಲ. (ಅನುಬಂಧ-43)

ಬ್ಯಾಂಕಿನ ಮಂಡ್ಯ ತಾಲ್ಲೂಕು ಕಟ್ಟಡಕ್ಕೆ ಬ್ರೈನ್ ಗೇಟ್ ಅಳವಡಿಸಲು ರೂ.1,53,990.00, ಮದ್ದೂರು ರಾತ್ರಿ ಶಾಖೆಗೆ ಅಲ್ಯೂಮಿನಿಯಮ್ ಪಾರ್ಟಿಸನ್ ಕ್ಯಾಬಿನ್ ಅಳವಡಿಸಲು ರೂ.56,640.00, ಬ್ಯಾಂಕಿನ 8 ಶಾಖೆಗಳಿಗೆ ನಾಮಫಲಕಗಳನ್ನು ಅಳವಡಿಸಲು ರೂ.74,500.00, ಮಂಡ್ಯ ತಾಲ್ಲೂಕು ಶಾಖೆಗೆ ಗ್ಲಾಸ್ ಡೋರ್, ಅಲ್ಯೂಮಿನಿಯಂ ಪಾರ್ಟಿಸನ್, ಪಾಲ್ ಸೀಲಿಂಗ್ ಅಳವಡಿಸಲು ರೂ.2,79,062.00 ಗಳಿಗೆ, ಸಿಬ್ಬಂದಿಗಳಿಗೆ ಕುರ್ಚಿ ಖರೀದಿಸಲು ರೂ.1,37,216.00 ಹಾಗೂ ಬ್ಯಾಂಕಿನ ಒಟ್ಟು 27 ಶಾಖೆಗಳಿಗೆ ಒಟ್ಟು ರೂ.9,21,816.00 ಗಳ ವೆಚ್ಚದಲ್ಲಿ ಗ್ರಾಹಕರ ಬೆಂಚು, ಚೇರು ಹಾಗೂ ಇತರೆ ಪೀಠೋಪಕರಣಗಳನ್ನು ಖರೀದಿಸಲು ವಿವಿಧ ಕಂಪನಿಗಳಿಂದ ಕೊಟೇಶನ್ ಕರೆದು ಕಾರ್ಯಾದೇಶ ನೀಡಿರುತ್ತಾರೆ. ಆದರೆ ಪತ್ರಿಕಾ ಪ್ರಕಟಣೆ ನೀಡಿ ನಿಯಮಾನುಸಾರ ಪಾರದರ್ಶಕ ಕಾಯ್ದೆಯಡಿ ಇ-ಟೆಂಡರ್ ಕರೆದು ಕಾಮಗಾರಿ ನೀಡಿರುವುದು ಕಂಡುಬಂದಿರುವುದಿಲ್ಲ. (ಅನುಬಂಧ-44)



Scanned with CamScanner

ಬ್ಯಾಂಕಿನ ಪ್ರಧಾನ ಕಛೇರಿ ಹಾಗೂ ಶಾಖೆಗಳಿಗೆ ಅಗತ್ಯವಿರುವ ಚೇರು, ಟೇಬಲ್, ರ್ಯಾಕ್ಸ್, ಟೇಬಲ್ ಆಭರಣ ಸೇಪ್ ಲಾಕರ್‌ಗಳು ಹಾಗೂ ಇತರ ಪೀಠೋಪಕರಣಗಳನ್ನು ಖರೀದಿಸಲು ದಿನಾಂಕ:07.07.2018 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಿದ್ದು ದರ ಪಟ್ಟಿ ಪಡೆದು ಮುಂದಿನ ಸಭೆಗೆ ಮಂಡಿಸಲು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಯವರಿಗೆ ಸೂಚಿಸಿರುತ್ತಾರೆ. ದಿನಾಂಕ:09.11.2018 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ದರ ಪಟ್ಟಿಗಳನ್ನು ಮಂಡಿಸಿದಾಗ ಸಭೆಯು ಮುಂದಿನ ಆಡಳಿತ ಮಂಡಳಿ ಸಭೆಗೆ ಮಂಡಿಸುವಂತ ಸರ್ವಾನುಮತದಿಂದ ತೀರ್ಮಾನಿಸಿರುತ್ತಾರೆ. ದಿನಾಂಕ:18.02.2019 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಕಡಿಮೆ ಕೊಟೇಶನ್ ನೀಡಿರುವ ಕಂಪನಿಗಳಿಗೆ ಪಿಠೋಪಕರಣ ಖರೀದಿಸಲು ಬ್ಯಾಂಕಿನ ಅಧ್ಯಕ್ಷರಿಗೆ ಅಧಿಕಾರ ನೀಡಿ ತೀರ್ಮಾನಿಸಿರುತ್ತಾರೆ. ಅದರಂತೆ ಸಿಸ್ಟ್ ಹೆಚ್ ಇನ್ಸುಟ್ರುಮೆಂಟ್ಸ್ ಹುಬ್ಬಳಿ ಇವರಿಗೆ ರೂ.14,79,858.00 ಗಳಿಗೆ ಹಾಗೂ ಎಸ್.ಎಸ್.ಎಸ್.ಸಿಟ್ಟಿಂಗ್ ಸಿಸ್ಟಂ ಬೆಂಗಳೂರು ರವರಿಗೆ ರೂ.15,52,550.00 ಗಳಿಗೆ ಪೀಠೋಪಕರಣಗಳನ್ನು ಸರಬರಾಜು ಮಾಡಲು ಆದೇಶ ನೀಡಿರುತ್ತಾರೆ. ಆದರೆ ನಿಯಮಾನುಸಾರ ಪಾರದರ್ಶಕ ಕಾಯ್ದೆಯಡಿ ದಿನಪತ್ರಿಕೆಯಲ್ಲಿ ಪ್ರಕಟಣೆ ಹೊರಡಿಸಿ ಇ-ಟೆಂಡರ್ ಕರೆದು ರೂ.30,32,408.00 ಗಳಿಗೆ ಕಾಮಗಾರಿ ನೀಡಿರುವುದು ಕಂಡುಬಂದಿರುವುದಿಲ್ಲ. ದಿನಾಂಕ:05.07.2019 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ರೂ.30,32,408.00 ಗಳಿಗೆ ಖರೀದಿಸಿರುವ ಪೀಠೋಪಕರಣಗಳ ಬಗ್ಗೆ ಚರ್ಚಿಸಿ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿ ವಿಷಯವನ್ನು ಕೈ ಬಿಡಲು ಸರ್ವಾನುಮತದಿಂದ ತೀರ್ಮಾನಿಸಿ ಪೀಠೋಪಕರಣಗಳನ್ನು ಸರಬರಾಜು ಮಾಡಿದ ಕಂಪನಿಗಳಿಗೆ ಪೀಠೋಪಕರಣಗಳನ್ನು ವಾಪಸ್ ಪಡೆದುಕೊಳ್ಳಲು ಪತ್ರ ಬರೆದಿರುತ್ತಾರೆ ಈ ಎಲ್ಲಾ ಪೀಠೋಪಕರಣಗಳನ್ನು ಹಿಂದಿರುಗಿಸಿರುತ್ತಾರೆ. (ಅನುಬಂಧ-45)

2016-17, 2017-18 ಮತ್ತು 2019-20 ನೇ ಸಾಲಿನಲ್ಲಿ ಪೀಠೋಪಕರಣಗಳನ್ನು ಪ್ರತಿ ವರ್ಷದಲ್ಲಿ ರೂ. 5.00 ಲಕ್ಷಗಳಿಗಿಂತ ಹೆಚ್ಚು ವ್ಯಯಿಸಿ ಕೇಂದ್ರ ಕಚೇರಿ ಮತ್ತು ಶಾಖೆಗಳಿಂದ ಬೇಡಿಕೆ ಪಟ್ಟಿ ಪಡೆದು ಒಂದೇ ಬಾರಿ ಪಾರದರ್ಶಕ ಕಾಯಿದೆಯಂತೆ ಇ-ಟೆಂಡರ್ ಮೂಲಕ ಖರೀದಿ ಮಾಡಲು ಅವಕಾಶವಿದ್ದಾಗ್ಯೂ ಸಹ ಬಿಡಿ ಬಿಡಿಯಾಗಿ ಪಿಠೋಪಕರಣಗಳನ್ನು ಮ್ಯಾನ್ಯುಯಲ್ ಟೆಂಡರ್ ಮೂಲಕ ಖರೀದಿಸಿರುವುದು ಕರ್ನಾಟಕ ಪಾರದರ್ಶಕ ಕಾಯಿದೆ ಉಲ್ಲಂಘನೆಯಾಗಿರುವುದು ಕಂಡು ಬರುತ್ತದೆ.

<u>ಆರೋಪ-4:ಬ್ಯಾಂಕಿನಲ್ಲಿ ಅವ್ಯವಹಾರ ನಡೆಸಿದ ಸಿಬ್ಬಂದಿಗಳಿಗೆ ರಕ್ಷಣೆ ನೀಡಿರುವುದು ಮೂಲಕ ಬ್ಯಾಂಕಿನ ಹಿತಾಸಕ್ತಿಯ ವಿರುದ್ಧವಾಗಿ ಆಡಳಿತ ಮಂಡಳಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ.</u>

ಸದರಿ ಆರೋಪದ ಕುರಿತು ತನಿಖಾ ತಂಡವು ಬ್ಯಾಂಕಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಲಾಗಿರುತ್ತದೆ. ದೂರುದಾರರಾದ ಶ್ರೀ ಎಂ. ಹೊನ್ನೇಗೌಡ, ನಿರ್ದೇಶಕರು, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ರವರು ಆರೋಪಿಸಿರುವಂತೆ ಮದ್ದೂರು ತಾಲ್ಲೂಕಿನಲ್ಲಿ ಒಟ್ಟು 53 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿರುತ್ತವೆ. (ಅನುಬಂಧ-46) ಈ ಪೈಕಿ 14 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಬ್ಯಾಂಕಿನ ಸಿಬ್ಬಂದಿಯಾದ ಶ್ರೀ ಎಂ. ಮರಿಸ್ವಾಮಿ, ಚಿಕ್ಕರಸಿನಕೆರೆ ವೃತ್ತ ಮೇಲ್ವಿಚಾರಕರು ಇವರ ವ್ಯಾಪ್ತಿಗೆ ಒಳಪಟ್ಟಿದ್ದು (ಅನುಬಂಧ-47) ಸದರಿಯವರ ವೃತ್ತದ ವ್ಯಾಪ್ತಿಯಲ್ಲಿನ 05 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ದುರುಪಯೋಗಗಳು ಕಂಡು ಬಂದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ವಿಚಾರಣೆಗೆ ಆದೇಶಿದ್ದು ವಿಚಾರಣೆಯು ಪ್ರಗತಿ ಹಂತದಲ್ಲಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಈ ಮಧ್ಯೆ ಸದರಿಯವರು ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಹಣದುರುಪಯೋಗ ಹಾಗೂ ಸಾಲದ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಲ ನೀಡಿ ಅವ್ಯವಹಾರಗಳನ್ನು ನಡೆಸಿರುವುದರಿಂದ ಶ್ರೀ ಎಂ. ಮರಿಸ್ವಾಮಿರವರನ್ನು ದಿನಾಂಕ:16.11.2016 ರಂದು ಬ್ಯಾಂಕಿನ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ. (ಅನುಬಂಧ-48) ಮುಂದುವರೆದು ದಿನಾಂಕ:12.05.2017 ರಂದು ಶ್ರೀ.ಎಂ.ಮರಿಸ್ವಾಮಿ ಇವರ ವಿರುದ್ಧ ದೋಷಾರೋಪ ಪಟ್ಟಿ ತಯಾರಿಸಿ ಬ್ಯಾಂಕಿನಿಂದ ಕಾರಣ ಕೇಳುವ ನೋಟೀಸ್ ನೀಡಲಾಗಿರುತ್ತದೆ. (ಅನುಬಂಧ-49) ನಂತರ ಸದರಿಯವರ ವಿರುದ್ಧ ಇದ್ದಂತಹ ಆರೋಪಗಳ ಕುರಿತು ಆಂತರಿಕ



Scanned with CamScanner

ವಿಚಾರಣೆ ಜರುಗಿಸಲು ಶ್ರೀ.ಬಿ.ಎಸ್.ಜವರಾಯಿಗೌಡ ನಿವೃತ್ತ ಸಹಕಾರ ಸಂಘಗಳ ಉಪನಿಬಂಧಕರು ರವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಿ ದಿನಾಂಕ:06.06.2017 ರಂದು ಆದೇಶ ಹೊರಡಿಸಲಾಗಿರುತ್ತದೆ. ಬಿತನ್ಮಧ್ಯೆ ದಿನಾಂಕ:23.06.2017 ರಂದು ಜರುಗಿದ ಬ್ಯಾಂಕಿನ ಆಡಳಿತ ಮಂಡಳಿ ವಿಷಯ ಸಂಖ್ಯೆ:16ರ ರೀತ್ಯಾ ಶ್ರೀ.ಎಂ.ಮರಿಸ್ವಾಮಿ ಇವರನ್ನು ಆಂತರಿಕ ವಿಚಾರಣೆಯ ತೀರ್ಪಿಗೆ ಒಳಪಟ್ಟು ಅಮಾನತ್ತುಗೊಳಿಸಿರುವ ಆದೇಶವನ್ನು ರದ್ದುಪಡಿಸಿ ಬ್ಯಾಂಕಿನ ಸೇವೆಯ ಮೇಲೆ ನೇಮಿಸಿಕೊಳ್ಳಲು ತೀರ್ಮಾನಿಸಿರುತ್ತಾರೆ. (ಅನುಬಂಧ-50) ಸದರಿ ಆಂತರಿಕ ವಿಚಾರಣಾ ವರದಿಯು ಸ್ವೀಕೃತವಾದ ನಂತರ ದಿನಾಂಕ:21.11.2017 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯ ವಿಷಯ ಸಂಖ್ಯೆ-9 ರಲ್ಲಿ ದಿನಾಂಕ:28.09.2017 ರಂದು ಬ್ಯಾಂಕಿಗೆ ಸ್ವೀಕೃತವಾಗಿರುವ ವಿಚಾರಣಾ ವರದಿಯನ್ನು ಪರಿಶೀಲಿಸಿ 2 ಆರೋಪಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಆರೋಪಗಳು ಸಾಬೀತಾದ ಹಿನ್ನಲೆಯಲ್ಲಿ ಬ್ಯಾಂಕಿನ ನೌಕರರ ಶಿಸ್ತು ನಿಯಮಾವಳಿಗಳಂತೆ ಕ್ರಮ ಕೈಗೊಳ್ಳಲು ಅಂತಿಮ ಕಾರಣ ಕೇಳುವ ನೋಟೀಸ್ ನೀಡಲು ತೀರ್ಮಾನಿಸಿದ್ದು (ಅನುಬಂಧ-51) ದಿನಾಂಕ:01.12.2017 ರಂದು ನೋಟೀಸ್‌ನ್ನು ಜಾರಿಗೊಳಿಸಿ ಲಿಖಿತ ವಿವರಣೆಯನ್ನು ನೀಡುವಂತೆ ಸೂಚಿಸಿರುತ್ತಾರೆ.(ಅನುಬಂಧ-52) ಸದರಿ ಆರೋಪಗಳಿಗೆ ಶ್ರೀ.ಎಂ.ಮರಿಸ್ವಾಮಿ ವೃತ್ತ ಮೇಲ್ವಿಚಾರಕರು ದಿನಾಂಕ:07.12.2017 ರಂದು ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.(ಅನುಬಂಧ-53) ದಿನಾಂಕ:29.12.2017 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯ ವಿಷಯ ಸಂಖ್ಯೆ-7 ರಲ್ಲಿ ಶ್ರೀ.ಎಂ.ಮರಿಸ್ವಾಮಿ ವೃತ್ತ ಮೇಲ್ವಿಚಾರಕರು ಸಲ್ಲಿಸಿರುವ ಸಮಜಾಯಿಷಿಯನ್ನು ಪರಿಶೀಲಿಸಿ ಸದರಿ ಸಿಬ್ಬಂಧಿಯವರಿಗೆ ತಕ್ಕಿನ ಶಿಕ್ಷೆಯಾಗಿ ರೂ.5000.00 ಗಳ ದಂಡ ವಿಧಿಸಲು ಸರ್ವಾನುಮತದಿಂದ ತೀರ್ಮಾನಿಸಿರುತ್ತಾರೆ. ದಿನಾಂಕ:25.05.2018 ರಂದು ಜರುಗಿದ ಆಡಳಿತ ಮಂಡಳಿ ಸಭೆಯ ವಿಷಯ ಸಂಖ್ಯೆ-26ರ ನಿರ್ಣಯದ ರೀತ್ಯಾ ಶ್ರೀ.ಎಂ.ಮರಿಸ್ವಾಮಿ ವೃತ್ತ ಮೇಲ್ವಿಚಾರಕರು ಇವರು ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಹಣ ದುರುಪಯೋಗದಂತಹ ಗುರುತರ ಅವ್ಯವಹಾರ ನಡೆದಿರುವುದು ವಿಚಾರಣಾ ವರದಿಯಿಂದ ಕಂಡುಬಂದಿರುವುದರಿಂದ ಆಡಳಿತ ಮಂಡಳಿಯು ಸದರಿಯವರಿಗೆ ತಕ್ಕಿನ ಶಿಕ್ಷೆಯಾಗಿ ರೂ.2,05,000.00 ಗಳ ದಂಡ ವಿಧಿಸಿ ಕೂಡಲೆ ದಂಡವನ್ನು ಪಾವತಿಸುವಂತೆ ದಿನಾಂಕ:31.05.2018 ರ ಕಛೇರಿಯ ಆದೇಶದ ರೀತ್ಯಾ ತಿಳಿಸಿರುವುದು ಕಂಡುಬಂದಿರುತ್ತದೆ. ಸದರಿ ಸಿಬ್ಬಂದಿಯವರು ದಿನಾಂಕ:05.06.2018 ರಂದು ಕೇಂದ್ರ ಕಛೇರಿಯ ಮುಖ್ಯಶಾಖೆಯ ಖಾತೆಗೆ ರೂ.2,05,000.00 ಗಳನ್ನು ಜಮಾಪಡಿಸಿರುವುದು ಕಂಡುಬಂದಿರುತ್ತದೆ. (ಅನುಬಂಧ-54)

ದೂರುದಾರರು ತಮ್ಮ ದೂರು ಅರ್ಜಿಯಲ್ಲಿ ಆರೋಪಿಸಿರುವಂತೆ ಶ್ರೀ.ಎಂ.ಮರಿಸ್ವಾಮಿ ಇವರು ವೃತ್ತ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸುತ್ತಿರುವ 14 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ 05 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಅವ್ಯವಹಾರ ಹಾಗೂ ಹಣ ದುರುಪಯೋಗ ಪ್ರಕರಣಗಳು ಕಂಡುಬಂದಿದ್ದು ಈಗಾಗಲೇ ಕಲಂ.64ರಡಿಯಲ್ಲಿ ವಿಚಾರಣೆಗೆ ಆದೇಶಿಸಿದ್ದು ವಿಚಾರಣೆಯು ಪ್ರಗತಿ ಹಂತದಲ್ಲಿರುತ್ತದೆ ಸದರಿ ವರದಿ ಸ್ವೀಕೃತವಾದ ನಂತರ ವಿಚಾರಣಾ ವರದಿಯಲ್ಲಿನ ಫಲಿತಾಂಶದ ರೀತ್ಯಾ ಕ್ರಮವಿಡಲು ಆಯಾಯ ಸಂಘಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ, ಆಡಳಿತ ಮಂಡಳಿಯು ದುರುಪಯೋಗದ ಮೊಬಲಗಿನ ವಸೂಲಾತಿ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣ ದಾಖಲಿಸಲು ಬಾಧ್ಯಸ್ಥರಾಗಿರುತ್ತದೆ ಎಂದು ಅಭಿಪ್ರಾಯಿಸಿದೆ. ಉಳಿದಂತೆ ಬ್ಯಾಂಕಿನ ಕಾರ್ಯವ್ಯಾಪ್ತಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಹಣದುರುಪಯೋಗ ಅವ್ಯವಹಾರ ಕಂಡಬಂದಿದ್ದಲ್ಲಿ ಕಲಂ.63 ಲೆಕ್ಕಪರಿಶೋಧನಾ ವರದಿ, ಕಲಂ.64ರ ವಿಚಾರಣಾ ವರದಿ, ಹಾಗೂ ಕಲಂ.65ರ ಪರಿವೀಕ್ಷಣಾ ವರದಿಯ ಆಧಾರದ ಮೇಲೆ ಬ್ಯಾಂಕಿನ ಸಿಬ್ಬಂಧಿಯ ವಿರುದ್ಧ ವಸೂಲಾತಿಗೆ ಜವಾಬ್ದಾರಿ ನಿಗಧಿಪಡಿಸಿದ್ದಲ್ಲಿ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರು ಸೂಕ್ತ ಕಾನೂನು



Scanned with CamScanner

ಕ್ರಮ ಅನುಸರಿಸಲು ಸೂಚಿಸಬಹುದಾಗಿರುತ್ತದೆ ಮತ್ತು ಸಂಘದ ಆಡಳಿತ ಮಂಡಳಿಯು ಸಹ ಸಕ್ಷಮ ಪ್ರಾಧಿಕಾರದ ಮುಂದೆ ವಸೂಲಾತಿಗೆ ಕಾನೂನು ಕ್ರಮ ಅನುಸರಿಸಲು ಅವಕಾಶವಿರುತ್ತದೆ ಎಂದು ಅಭಿಪ್ರಾಯಿಸಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ದೂರುದಾರರು ಸಲ್ಲಿಸಿರುವ ಹೇಳಿಕೆ, ದಾಖಲಾತಿಗಳು, ಬ್ಯಾಂಕಿನಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಆರೋಪವಾರು ಅಭಿಪ್ರಾಯವನ್ನು ಸಿದ್ಧಪಡಿಸಿ ಮುಂದಿನ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ಸಲ್ಲಿಸಿದೆ.

ತಮ್ಮ ವಿಶ್ವಾಸಿ
ಸಹಿ/-
ಸಹಕಾರ ಸಂಘಗಳ ಉಪನಿಬಂಧಕರು
ಮೈಸೂರು ಜಿಲ್ಲೆ, ಮೈಸೂರು

ಪ್ರತಿಯನ್ನು:

1. ಮಾನ್ಯ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.
2. ಸಹಕಾರ ಸಂಘಗಳ ಜಂಟಿ ನಿಬಂಧಕರು ಮೈಸೂರು ಪ್ರಾಂತ, ಮೈಸೂರು ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು
ಮೈಸೂರು ಜಿಲ್ಲೆ, ಮೈಸೂರು



Scanned with CamScanner

ಅನುಬಂಧ - 2

By Email
04/12/2020

ಕರ್ನಾಟಕ ಸರ್ಕಾರ

ಸಹಕಾರ ಇಲಾಖೆ

e-mail:jrcs-mysore-ka@nic.in Phone No:0821-2520823/2431414

**ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರ ಕಾರ್ಯಾಲಯ**

**ಸಾರ್ವಜನಿಕ ಕಛೇರಿಗಳ ಕಟ್ಟಡ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು-570024**

ವಿಷಯ: ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಈ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆ ನಡೆಸುವ ಕುರಿತು.

ಉಲ್ಲೇಖ :
1 ಸರ್ಕಾರದ ಆದೇಶ ಸಂಖ್ಯೆ:ಸಿಒ 32 ಸಿಸಿಬಿ 2020, ಬೆಂಗಳೂರು ದಿನಾಂಕ:05-05-2020.
2 ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಇವರ ವರದಿ ಕ್ರಮಾಂಕ:ಉನಿಮೈ/ದೂರು ಅರ್ಜಿ/ಜಿ.ಸ.ಕೇ.ಬ್ಯಾಂಕ್ ಮಂಡ್ಯ/2020-21 ದಿನಾಂಕ:15-09-2020.
3 ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು), ಕೇಂದ್ರ ಕಛೇರಿ, ಬೆಂಗಳೂರು ರವರ ಪತ್ರ ಕ್ರಮಾಂಕ:ಆರ್‌ಸಿಎಸ್/ಸಿಆರ್‌ಡಿ/ಕೆಎಂಸಿ-1/14/2020-21 ದಿನಾಂಕ:07-10-2020 ಮತ್ತು 28-10-2020.

*-*-*-*-*-*

**ಪ್ರಸ್ತಾವನೆ:**

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ , ಈ ಬ್ಯಾಂಕಿನಲ್ಲಿ ಅವ್ಯವಹಾರಗಳು ನಡೆದಿವೆ ಎಂಬುದಾಗಿ ತಿಳಿಸಿ ಶ್ರೀ ಎಂ ಹೊನ್ನೇಗೌಡ, ನಿರ್ದೇಶಕರು, ಮಂಡ್ಯ ಜಿಲ್ಲಾ ಸಹಕಾರ ಬ್ಯಾಂಕ್ ನಿ., ಇವರು ಸರ್ಕಾರಕ್ಕೆ ಸಲ್ಲಿಸಿದ್ದ ದೂರು ಅರ್ಜಿ ಸಂಬಂಧ ಬ್ಯಾಂಕಿನಲ್ಲಿ ಸುಮಾರು ರೂ.965.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಸುವ ಬಗ್ಗೆ, ಬ್ಯಾಂಕಿನ ಭದ್ರತಾ ವ್ಯವಸ್ಥೆಗಾಗಿ ವಾರ್ಷಿಕ ಸುಮಾರು 200.00 ಲಕ್ಷಗಳ ವೆಚ್ಚದ ಸಂಬಂಧ ಕೆ.ಟಿ.ಪಿ.ಪಿ ಆಕ್ಟ್ ಉಲ್ಲಂಘಿಸಿ ಗುತ್ತಿಗೆ ನೀಡಿರುವ ಬಗ್ಗೆ, ಪೀಠೋಪಕರಣ ಮತ್ತು ಲೇಖನ ಸಾಮಗ್ರಿಯನ್ನು ಯಾವುದೇ ನಿಯಮ ಅನುಸರಿಸದೇ ಖರೀದಿಸಿರುವ ಬಗ್ಗೆ ಹಾಗೂ ಬ್ಯಾಂಕಿನ ಹಿತಾಸಕ್ತಿ ವಿರುದ್ಧ ಬ್ಯಾಂಕಿನ ಆಡಳಿತ ಮಂಡಳಿಯು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಮೈಸೂರು ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕರ ನೇತೃತ್ವದಲ್ಲಿ ತಂಡವನ್ನು ರಚಿಸಿ ಉಲ್ಲೇಖ (1) ರನ್ವಯ ಸರ್ಕಾರದಿಂದ ಆದೇಶಿಸಲಾಗಿರುತ್ತದೆ. ಸದರಿ ಆದೇಶದ ರೀತ್ಯಾ ಉಲ್ಲೇಖ (2) ರನ್ವಯ ಸಹಕಾರ ಸಂಘಗಳ ಉಪ ನಿಬಂಧಕರು ಆರೋಪವಾರು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯನ್ನಾಧರಿಸಿ ಉಲ್ಲೇಖ (3) ರನ್ವಯ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಕಲಂ 64 ರಡಿ ವಿಚಾರಣೆ ನಡೆಸಲು ನಿರ್ದೇಶಿಸಿರುತ್ತಾರೆ.

ದಿನಾಂಕ:21.09.2020 ರಿಂದ 30.09.2020 ರವರೆಗಿನ ಅವಧಿಯಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಡಿ.ಸಿ. ತಮ್ಮಣ್ಣ, ಮದ್ದೂರು ವಿಧಾನ ಸಭಾ ಕ್ಷೇತ್ರ ಇವರು ನಿಯಮ 73 ರಡಿಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಗಮನ ಸೆಳೆಯುವ ಸೂಚನೆಯನ್ನು ನೀಡಿ "ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಇಲ್ಲಿ ಹಲವು ಅವ್ಯವಹಾರಗಳು ನಡೆದಿದ್ದು, 1) M/s UST International Pvt. Ltd., ರವರಿಗೆ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಕೆಗೆ ಗುತ್ತಿಗೆ ನೀಡುವಾಗ ಆಗಿರುವ ಅವ್ಯವಹಾರ? 2) ಸಿಬಿಎಸ್ ಗುತ್ತಿಗೆ ನೀಡುವಾಗ ಬ್ಯಾಂಕಿನ ಆರ್.ಎಫ್.ಪಿ ಉಲ್ಲಂಘನೆ ಮಾಡಿ ನಡೆಸಿರುವ ಅವ್ಯವಹಾರ? 3) ಸಿ.ಬಿ.ಎಸ್ ಗುತ್ತಿಗೆ ಆದೇಶ ನೀಡುವ ಪೂರ್ವದಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯ ನಿರ್ಣಯಗಳು ಸ್ಥಿರೀಕರಣ ಮಾಡದೇ ನಡೆಸಲಾಗಿರುವ ಅವ್ಯವಹಾರಗಳ ಕುರಿತು ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಲು ಅವಕಾಶ ನೀಡಲು ಕೋರಿದೆ" ಎಂದು ಮಾನ್ಯ ಸಹಕಾರ ಸಚಿವರಿಂದ ಉತ್ತರಗಳನ್ನು ಅಪೇಕ್ಷಿಸಿರುತ್ತಾರೆ. ಈ ಸಂಬಂಧ ಸರ್ಕಾರವು ಉತ್ತರ ಸಲ್ಲಿಸಿ ಕರ್ನಾಟಕ ಸಹಕಾರ ಸಂಘಗಳ

ಕಾಯ್ದೆ-1959 ರ ಕಲಂ 64 ರ ವಿಚಾರಣೆಗೆ ಒಳಪಡಿಸುವುದಾಗಿ ಭರವಸೆ ನೀಡಲಾಗಿರುತ್ತದೆ. ಉಲ್ಲೇಖ (2) ರ
ವರದಿಯನ್ನು ಪರಿಶೀಲಿಸಲಾಗಿ ಒಟ್ಟು 04 ಆರೋಪಗಳ ಪೈಕಿ 03 ಆರೋಪಗಳಲ್ಲಿ ಬ್ಯಾಂಕಿನ ಕೋರ್
ಬ್ಯಾಂಕಿಂಗ್ ವ್ಯವಸ್ಥೆ, ಭದ್ರತಾ ಸಿಬ್ಬಂದಿಗಳನ್ನು ಗುತ್ತಿಗೆದಾರರಿಂದ ನೇಮಿಸುವ ಬಗ್ಗೆ ಹಾಗೂ ಪೀಠೋ .ಕರಣ
ಮತ್ತು ಲೇಖನ ಸಾಮಗ್ರಿಗಳ ಖರೀದಿಯಲ್ಲಿ ನಿಯಮಗಳ ಉಲ್ಲಂಘನೆಯಾಗಿರುವುದು ಕಂಡು ಬಂದಿದ್ದು. ಈ
ಸಂಬಂಧ ಶಾಸನಬದ್ಧ ವಿಚಾರಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಜವಾಬ್ದಾರಿಯನ್ನು ನಿಗದಿ ಪಡಿಸುವ ಸಂಬಂಧ
ಆರೋಪಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ-1959 ರ ಕಲಂ 64 ರಡಿ ವಿಚಾರಣೆಗೆ
ಆದೇಶಿಸುವುದು ಸೂಕ್ತವೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ**

ಸಂಖ್ಯೆ:ಜೆಆರ್‌ಎಂ/ಆಡಳಿತ/ಎ/ಕ್ಯೂಎಸ್‌ಇ/ಸಿ.ಆರ್-40/2020-21 ದಿನಾಂಕ:02-12-2020

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಇ-71 / ಸಿಎಲ್‌ಎಂ / 2016 ದಿನಾಂಕ: 06-12-2016 ರಂತೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಪ್ರಕಾಶ್‌ರಾವ್, ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಆದ ನಾನು ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇದರಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರಗಳ ಕುರಿತು ಈ ಕೆಳಕಂಡ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನಾಗಿ ಶ್ರೀ ಜಿ.ಆರ್. ವಿಜಯ ಕುಮಾರ್ ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಇವರನ್ನು ನೇಮಕಮಾಡಿ ಆದೇಶಿಸಿರುತ್ತೇನೆ. ನೇಮಕಗೊಂಡಿರುವ ವಿಚಾರಣಾಧಿಕಾರಿಗಳು ವಿಚಾರಣೆಯನ್ನು 03 ತಿಂಗಳೊಳಗಾಗಿ ಪೂರ್ಣಗೊಳಿಸಿ ಸ್ಪಷ್ಟ ಅಭಿಪ್ರಾಯ ಮತ್ತು ದಾಖಲೆಗಳೊಡನೆ ವಿಚಾರಣಾ ವರದಿಯನ್ನು 05 ಪ್ರತಿಗಳಲ್ಲಿ ಈ ಕಛೇರಿಗೆ ಸಲ್ಲಿಸಲು ಆದೇಶಿಸಿದೆ.

<u>ಆರೋಪ -1</u>

ಬ್ಯಾಂಕಿನಲ್ಲಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ (ಸಿ.ಬಿ.ಎಸ್) ನ್ನು M/s UST Globle Resource Pvt Ltd., Trivendram ಕಂಪನಿಯಿಂದ ದಿನಾಂಕ:12.12.2012 ರಿಂದ 12.08.2019 ರವರೆಗೆ ಐದು ವರ್ಷಗಳಿಗೆ ಅಳವಡಿಸಲಾಗಿದೆ. ಈ ಅವಧಿಗೆ ಪಾವತಿಸಿರುವ ಮೊತ್ತ ರೂ.7.73 ಕೋಟಿಗಳಾಗಿದ್ದು, ಅವಧಿಯು ದಿನಾಂಕ:12.08.2019 ಕ್ಕೆ ಮುಕ್ತಾಯಗೊಂಡಿರುತ್ತದೆ. ಈ ರೀತಿ ಅವಧಿ ಮುಕ್ತಾಯಗೊಳ್ಳುವುದಕ್ಕೂ ಮುಂಚಿತವಾಗಿ ಮುಂದಿನ ಅವಧಿಗೆ ಹೊಸ ಟೆಂಡರ್ ಪ್ರಕ್ರಿಯೆ ಮೂಲಕ ಸಿ.ಬಿ.ಎಸ್ ಸೇವೆ ಒದಗಿಸಿಕೊಡುವವರನ್ನು ಆಯ್ಕೆಮಾಡದೆ ಹಿಂದಿನ ಅವಧಿಯಲ್ಲಿ ನೇಮಕಗೊಂಡಿರುವ ಕಂಪನಿಯವರನ್ನೇ ಮುಂದುವರಿಸಿ ಹಳೆಯ ದರ ಪಾವತಿಸುವುದರ ಮೂಲಕ ಬ್ಯಾಂಕಿಗೆ ನಷ್ಟ ಉಂಟುಮಾಡಿರುವ ಬಗ್ಗೆ.

ಸಿ.ಬಿ.ಎಸ್ ಸೇವೆ ಒದಗಿಸುವಲ್ಲಿ ಪ್ರಸ್ತುತ ದರಗಳು ಹಿಂದಿನ ಅವಧಿಯ ದರಗಳಿಗಿಂತ ಕಡಿಮೆ ಇರುವ ಸಾಧ್ಯತೆಗಳಿದ್ದಾಗ್ಯೂ ರೂ.965.00 ಲಕ್ಷಗಳಿಗೆ ಅಂದಾಜು ತಯಾರಿಸಿ, ಬ್ಯಾಂಕಿಗೆ ನಷ್ಟ ಉಂಟುಮಾಡಿರುವ ಮತ್ತು ಅರ್ಹತೆ ಪಡೆಯದಿರುವ ಸಂಸ್ಥೆಗೆ ಟೆಂಡರ್ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ-1999 ಮತ್ತು ನಿಯಮಗಳು-2000 ರ ಅವಕಾಶಗಳ ರೀತ್ಯಾ ಟೆಂಡರ್ ಪ್ರಕ್ರಿಯೆಯನ್ನು ನಡೆದಿರುವುದು. ಆ ಮೂಲಕ ಬ್ಯಾಂಕಿನ ವ್ಯವಹರಣೆಯಲ್ಲಿ ಅನಾವಶ್ಯಕವಾಗಿ ಆರೋಪಗಳನ್ನು ಮಾಡಿ ದೂರುಗಳ ವಿಚಾರಣೆಗೆ ಅವಕಾಶ ಮಾಡಿಕೊಡಲು ಕಾರಣರಾದವರ ವಿರುದ್ಧ ಜವಾಬ್ದಾರಿ ನಿಗಧಿಪಡಿಸುವ ಬಗ್ಗೆ.

ಬ್ಯಾಂಕಿಗೆ ಸಿ.ಬಿ.ಎಸ್ ಸೇವೆಗಳನ್ನು ಪಡೆಯುವ ಸಂಬಂಧ ತಾಂತ್ರಿಕ ಸಲಹೆಗಾರರನ್ನು ನೇಮಿಸಿಕೊಳ್ಳುವಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ-1999 ಮತ್ತು ನಿಯಮಗಳು-2000 ರಂತೆ ನೇಮಿಸಿಕೊಳ್ಳದೆ ಏಕಪಕ್ಷೀಯ ನಿರ್ಣಯ ಕೈಗೊಂಡಿರುವ ಹಾಗೂ ಸಿ.ಬಿ.ಎಸ್ ಸಂಬಂಧ ಕಾಲಕಾಲಕ್ಕೆ ಆಡಳಿತ ಮಂಡಳಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ಆಡಳಿತ ಮಂಡಳಿ ಅಗತ್ಯ ನಿರ್ಣಯಗಳನ್ನು ಕೈಗೊಳ್ಳಲು ವಿಫಲರಾಗುವಂತೆ ಮಾಡಿರುವ ಬ್ಯಾಂಕಿನ ಅಧಿಕಾರಿಗಳ ಮೇಲೆ ಜವಾಬ್ದಾರಿ ನಿಗದಿಪಡಿಸುವ ಬಗ್ಗೆ.

ಆರೋಪ - 2

ಬ್ಯಾಂಕಿನಲ್ಲಿ ಭದ್ರತಾ ಸೇವೆಗಳಿಗೆ ವಾರ್ಷಿಕವಾಗಿ ಅಂದಾಜು ರೂ.200.00 ಲಕ್ಷಗಳನ್ನು ವೆಚ್ಚ ಮಾಡುತ್ತಿದ್ದು, ಇಂತಹ ಬೃಹತ್ ಮೊತ್ತದ ಸೇವೆ ಪಡೆಯುವಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ-1999 ಮತ್ತು ನಿಯಮಗಳು-2000 ರ ಅವಕಾಶಗಳ ರೀತ್ಯಾ ಟೆಂಡರ್ ಕರೆಯದೆ ಒಂದೇ ಏಜೆನ್ಸಿಗೆ ಕಳೆದ 10 ವರ್ಷಗಳಂದ ಗುತ್ತಿಗೆ ನೀಡಿರುವುದು ಹಾಗೂ ಗುತ್ತಿಗೆದಾರರು ಭದ್ರತಾ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಮತ್ತು ಭತ್ಯೆಗಳನ್ನು ಪಾವತಿಸುವಲ್ಲಿ ವಿಫಲರಾಗಿರುವುದನ್ನು ಗಮನಿಸದೆ ಲೋಪವೆಸಗಿರುವ ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ವಿರುದ್ಧ ಜವಾಬ್ದಾರಿ ನಿಗದಿಪಡಿಸುವ ಬಗ್ಗೆ.

<u>ಆರೋಪ – 3</u>

ಬ್ಯಾಂಕಿನ ಉಪಯೋಗಕ್ಕೆ ಪೀಠೋಪಕರಣ ಮತ್ತು ಲೇಖನ ಸಾಮಗ್ರಿಗಳ ಖರೀದಿಯನ್ನು 2015-16 ನೇ ಸಾಲಿನಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ-1999 ಮತ್ತು ನಿಯಮಗಳು-2000 ರ ಅವಕಾಶಗಳ ರೀತ್ಯಾ ಖರೀದಿ ಪ್ರಕ್ರಿಯೆ ನಡೆಸದೆ, ಸ್ವ-ಇಚ್ಛೆಯಂತೆ ಖರೀದಿ ಕ್ರಮ ನಡೆಸಿರುವ ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ವಿರುದ್ಧ ಜವಾಬ್ದಾರಿ ನಿಗದಿಪಡಿಸುವ ಬಗ್ಗೆ.

<u>ಆರೋಪ – 4</u>

ಬ್ಯಾಂಕಿನ ಅಧಿಕಾರಿ/ಸಿಬ್ಬಂದಿಗಳು ಬ್ಯಾಂಕಿನಲ್ಲಿ ಮತ್ತು ಬ್ಯಾಂಕಿನ ಸದಸ್ಯ ಸಹಕಾರ ಸಂಘಗಳಲ್ಲಿ ಹಣ ದುರುಪಯೋಗದಂತಹ ಗುರುತರ ಆರೋಪಗಳನ್ನು ಹೊಂದಿದ್ದಾಗ್ಯೂ ಸದರಿಯವರ ವಿರುದ್ಧ ಕ್ರಮ ಕೈಗೊಳ್ಳದಿರುವ ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ವಿರುದ್ಧ ಜವಾಬ್ದಾರಿ ನಿಗದಿಪಡಿಸುವ ಬಗ್ಗೆ.

ಈ ಆದೇಶವನ್ನು ಸ್ವಸಹಿ ಹಾಗೂ ಕಛೇರಿ ಮೊಹರಿನೊಂದಿಗೆ ದಿನಾಂಕ:02-12-2020 ರಂದು ನೀಡಲಾಗಿದೆ.

ಸಹಿ/-
(ಪ್ರಕಾಶ್ ರಾವ್)
ಸಹಕಾರ ಸಂಘಗಳ ಜಂಟಿ ನಿಬಂಧಕರು,
ಮೈಸೂರು ಪ್ರಾಂತ, ಮೈಸೂರು

ಗೆ,
ಶ್ರೀ ಬಿ.ಆರ್. ವಿಜಯ ಕುಮಾರ್
ಸಹಕಾರ ಸಂಘಗಳ ಉಪ ನಿಬಂಧಕರು,
ಮೈಸೂರು ಜಿಲ್ಲೆ, ಮೈಸೂರು

ಪ್ರತಿಯನ್ನು:

1. ಗೌರವಗಳೊಂದಿಗೆ ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ ಇವರಿಗೆ ಕಳುಹಿಸುತ್ತಾ, ವಿಚಾರಣಾಧಿಕಾರಿಗಳಿಗೆ ವಿಚಾರಣಾ ಸಮಯದಲ್ಲಿ ಅಗತ್ಯ ದಾಖಲೆ ಮತ್ತು ಮಾಹಿತಿಗಳನ್ನು ಒದಗಿಸಲು ತಿಳಿಸಿದೆ.
4. ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ಜಿಲ್ಲೆ, ಮಂಡ್ಯ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಕಛೇರಿಯ ಆದೇಶದ ಕಡತಕ್ಕೆ

ಸಹಕಾರ ಸಂಘಗಳ ಜಂಟಿ ನಿಬಂಧಕರು,
ಮೈಸೂರು ಪ್ರಾಂತ, ಮೈಸೂರು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ಆರೋಪಗಳ ಕುರಿತು ಕೈಗೊಳ್ಳಲಾಗಿರುವ ತನಿಖಾ ವರದಿಯ ಬಗ್ಗೆ.

**ಓದಲಾಗಿದೆ** : 1. ಸರ್ಕಾರದ ಆದೇಶ ಸಂಖ್ಯೆ: ಸಿಒ 32 ಸಿಸಿಬಿ 2020, ದಿನಾಂಕ: 05.05.2020.
2. ಸಹಕಾರ ಸಂಘಗಳ ಉಪ ನಿಬಂಧಕರ ಪತ್ರ ಸಂಖ್ಯೆ: ಉನಿಮೈ:ದೂರು ಅರ್ಜಿ.ಜಿ.ಸ.ಕೇ.ಬ್ಯಾಂಕ್ ಮಂಡ್ಯ: 2020-21, ದಿನಾಂಕ:15-09-2020.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಆದೇಶದಲ್ಲಿ ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಸುಮಾರು ರೂ.965.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ (ಸಿಬಿಎಸ್) ಅಳವಡಿಸುವ ಬಗ್ಗೆ ಬ್ಯಾಂಕಿನ ಆರ್‌ಪಿಎಫ್ ಮತ್ತು ಕೆ.ಟಿ.ಟಿ.ಪಿ ಆಕ್ಟ್ ಉಲ್ಲಂಘಿಸಿ ಟೆಂಡರ್ ಕರೆಯದೆ ಒಂದೇ ಏಜೆನ್ಸಿಯವರಿಗೆ ಗುತ್ತಿಗೆ ನೀಡಿ ಬ್ಯಾಂಕಿಗೆ ನಷ್ಟ ಉಂಟುಮಾಡಿದ್ದು, ಯಾವುದೇ ನಿಯಮಗಳನ್ನು ಅನುಸರಿಸದೆ ಪಿಠೋಪಕರಣ ಖರೀದಿ ಮತ್ತು ಲೇಖನ ಸಾಮಾಗ್ರಿ ಖರೀದಿಸಿರುವುದಾಗಿ ಹಾಗೂ ಬ್ಯಾಂಕಿನಲ್ಲಿ ಅವ್ಯವಹಾರ ನಡೆಸಿದ ಸಿಬ್ಬಂದಿಗಳಿಗೆ ರಕ್ಷಣೆ ನೀಡಿರುವುದರ ಮೂಲಕ ಬ್ಯಾಂಕಿನ ಹಿತಾಸಕ್ತಿ ವಿರುದ್ಧವಾಗಿ ಆಡಳಿತ ಮಂಡಳಿ ಕಾರ್ಯ ನಿರ್ವಹಿಸುತ್ತಿರುವುದಾಗಿ ಶ್ರೀ ಎಂ. ಹೊನ್ನೇಗೌಡ, ನಿರ್ದೇಶಕರು, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಇವರು ಸಲ್ಲಿಸಿರುವ ದೂರಿನನ್ವಯ ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಆಡಳಿತ ಮಂಡಳಿಯ ಅಧಿಕಾರದ ಅವಧಿಯು ಮೇ-2020ಕ್ಕೆ ಅಧಿಕೃತವಾಗಿ ಅಂತ್ಯಗೊಳ್ಳಲಿದ್ದು, ಈ ಹಂತದಲ್ಲಿ ಆಡಳಿತ ಮಂಡಳಿಯು ತೆಗೆದುಕೊಂಡ ಪ್ರಮುಖ ಹಣಕಾಸಿನ ನಿರ್ಣಯಗಳನ್ನು ತಡೆಹಿಡಿದು, ಬ್ಯಾಂಕಿನ ನಾಲ್ಕು ಆರೋಪಗಳ ಬಗ್ಗೆ ತನಿಖೆ ನಡೆಸಲು ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ಇವರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ ತನಿಖಾ ತಂಡವು ತನಿಖೆ ನಡೆಸಿ ಬ್ಯಾಂಕಿನಲ್ಲಿ ನಡೆದಿದೆ ಎನ್ನಲಾದ ನಾಲ್ಕು ಆರೋಪಗಳಲ್ಲಿ ಮೂರು ಆರೋಪಗಳು ಸಾಬೀತಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

ತನಿಖಾ ತಂಡವು ಸಲ್ಲಿಸಿರುವ ತನಿಖಾ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಪರಿಶೀಲಿಸಿದ ಸರ್ಕಾರವು ಸದರಿ ಬ್ಯಾಂಕಿನಲ್ಲಿ ಸುಮಾರು ರೂ.965.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಸುವ ಬಗ್ಗೆ ಆಡಳಿತ ಮಂಡಳಿಯು ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಹಾಗೂ 2000 ನಿಯಮಗಳನ್ನು ಪಾಲಿಸದೆ ಇರುವ ಆರೋಪವು ಸಾಬೀತಾಗಿರುವುದರಿಂದ ಆಡಳಿತ ಮಂಡಳಿಯ ನಿರ್ಣಯವನ್ನು ರದ್ದು ಪಡಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿದೆ.

**ಸರ್ಕಾರದ ಆದೇಶ ಸಂಖ್ಯೆ :ಸಿಒ 32 ಸಿಸಿಬಿ 2020, ಬೆಂಗಳೂರು, ದಿ: 22.10.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಸುಮಾರು ರೂ.965.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೋರ್ ಬ್ಯಾಂಕಿಂಗ್ ಸಲ್ಯೂಷನ್ ಅಳವಡಿಕೆಯ ಪ್ರಕ್ರಿಯೆಯನ್ನು ರದ್ದುಗೊಳಿಸಿದೆ.

ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 ಹಾಗೂ 2000 ನಿಯಮಗಳ ರೀತ್ಯಾ ಹೊಸದಾಗಿ ಪ್ರಕ್ರಿಯೆ ನಡೆಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ.ಎಂ ಆಶಾ)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ
22/10/2020

CRD 4/11/2020

**ಪ್ರತಿಗಳು:**

1. ಸಹಕಾರ ಸಂಘಗಳ ನಿಬಂಧಕರು, ನಂ.01, ಅಲಿ ಅಸ್ಕರ್ ರಸ್ತೆ, ಬೆಂಗಳೂರು-560052

534
5/11

2. ವ್ಯವಸ್ಥಾಪಕ ನಿರ್ದೇಶಕರು/ಅಧ್ಯಕ್ಷರು, ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಮಂಡ್ಯ.
3. ಮಾನ್ಯ ಸಹಕಾರ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು.
5. ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಶಾಖೆ, ಸಹಕಾರ ಇಲಾಖೆ.
6. ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿ.